# ಕುವೆಂಪು ವಿಶ್ವವಿದ್ಯಾಲಯ

ದಿನಾಂಕ:03–07–2026 ರಂದು ಶುಕ್ರವಾರ "ಶತಮಾನೋತ್ಸವ ಭವನದ ಹೊಸ ಸಿಂಡಿಕೇಟ್ ಸಭಾಂಗಣ" ಇಲ್ಲಿ ನಡೆದ 179ನೇ "ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆ"ಯ ನಡಾವಳಿಗಳು.

**ಹಾಜರಾದ ಸದಸ್ಯರು:**

| | | |
|---|---|---|
| 1. | ಪ್ರೊ. ಶರತ್ ಅನಂತಮೂರ್ತಿ ಕುಲಪತಿಗಳು | ಅಧ್ಯಕ್ಷರು |
| 2. | ಶ್ರೀ ಹೇಮಂತ್ ಎನ್. ಐ.ಎ.ಎಸ್., ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |
| 3. | ಪ್ರೊ. ಆರ್. ತಿಮ್ಮರಾಯಪ್ಪ, ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 4. | ಡಾ. ಕೇಶವ ಹೆಚ್, ಜಂಟಿ ನಿರ್ದೇಶಕರು | ಸದಸ್ಯರು |
| 5. | ಶ್ರೀ ಡಿ.ಎಸ್. ಅರುಣ್, ಶಾಸಕರು, ಕರ್ನಾಟಕ ವಿಧಾನ ಪರಿಷತ್ | ಸದಸ್ಯರು |
| 6. | ಡಾ. ಸಂಧ್ಯಾ ಕಾವೇರಿ, ಪ್ರಾಂಶುಪಾಲರು | ಸದಸ್ಯರು |
| 7. | ಶ್ರೀ ಉಲ್ಲಾಸ್ ಇ.ಜಿ, ಪ್ರಾಂಶುಪಾಲರು | ಸದಸ್ಯರು |
| 8. | ಡಾ. ಚಿದಾನಂದ ಎನ್.ಕೆ, ಪ್ರಾಂಶುಪಾಲರು | ಸದಸ್ಯರು |
| 9. | ಡಾ. ಎಂ. ವೆಂಕಟೇಶ್, ಪ್ರಾಂಶುಪಾಲರು | ಸದಸ್ಯರು |
| 10. | ಡಾ. ಪ್ರಭಾಕರ್ ಎಸ್. ಮಂಟೂರೆ, ಪ್ರಾಂಶುಪಾಲರು | ಸದಸ್ಯರು |
| 11. | ಡಾ.ಬಿ.ಜಿ. ಚನ್ನಪ್ಪ, ಪ್ರಾಂಶುಪಾಲರು | ಸದಸ್ಯರು |
| 12. | ಡಾ. ರಾಕೇಶ್ ಎಸ್.ಪಿ, ಪ್ರಾಂಶುಪಾಲರು | ಸದಸ್ಯರು |
| 13. | ಡಾ. ಶಿವಕುಮಾರ್ ಜಿ.ಎಸ್, ಪ್ರಾಂಶುಪಾಲರು | ಸದಸ್ಯರು |
| 14. | ಡಾ. ಜಿ.ಎಂ. ಗಣೇಶ್, ಪ್ರಾಂಶುಪಾಲರು | ಸದಸ್ಯರು |
| 15. | ಡಾ. ಧನಂಜಯ ಪ್ರಾಂಶುಪಾಲರು | ಸದಸ್ಯರು |
| 16. | ಪ್ರೊ. ಅಶೋಕ್ ಆರ್. ಲಮಾಣಿ. ಪ್ರಾಧ್ಯಾಪಕರು | ಸದಸ್ಯರು |
| 17. | ಪ್ರೊ. ಜಿ.ಜೆ. ಸತೀಶ್. ಪ್ರಾಧ್ಯಾಪಕರು | ಸದಸ್ಯರು |
| 18. | ಪ್ರೊ. ವರ್ಗೀಸ್ ಪಿ.ಎ. ಪ್ರಾಧ್ಯಾಪಕರು | ಸದಸ್ಯರು |
| 19. | ಪ್ರೊ. ವೆಂಕಟೇಶ್ ಎಸ್. ಪ್ರಾಧ್ಯಾಪಕರು | ಸದಸ್ಯರು |
| 20. | ಪ್ರೊ. ಯಾದವ್ ದಶರಥರಾವ್ ಬೋಡ್ಕೆ. ಪ್ರಾಧ್ಯಾಪಕರು | ಸದಸ್ಯರು |
| 21. | ಪ್ರೊ. ಚಂದ್ರಶೇಖರ್ ಎಸ್, ಡೀನರು, ಕಲಾ ನಿಕಾಯ | ಸದಸ್ಯರು |
| 22. | ಪ್ರೊ. ಗಜಾನನ ಪ್ರಭು ಬಿ, ಡೀನರು, ಶಿಕ್ಷಣ ನಿಕಾಯ | ಸದಸ್ಯರು |
| 23. | ಪ್ರೊ. ರಾಜ ನಾಯಕ, ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ | ಸದಸ್ಯರು |
| 24. | ಪ್ರೊ. ಹೆಚ್.ಎನ್. ರಮೇಶ್, ಡೀನರು, ವಾಣಿಜ್ಯ ನಿಕಾಯ | ಸದಸ್ಯರು |
| 25. | ಡಾ. ಆರ್.ಹೆಚ್. ವಾಲ್ಮೀಕಿ, ಗ್ರಂಥಪಾಲಕರು, (ಪ್ರಭಾರ) | ಸದಸ್ಯರು |
| 26. | ಪ್ರೊ. ಯೋಗೇಂದ್ರ ಕೆ, ನಿರ್ದೇಶಕರು ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ | ಸದಸ್ಯರು |
| 27. | ಪ್ರೊ. ಗಜಾನನ ಪ್ರಭು ಬಿ, ನಿರ್ದೇಶಕರು, ಕಾಲೇಜು ಅಭಿವೃದ್ಧಿ ಪರಿಷತ್, | ಸದಸ್ಯರು |
| 28. | ಡಾ. ಎನ್.ಡಿ. ವಿರೂಪಾಕ್ಷ, ನಿರ್ದೇಶಕರು ದೈಹಿಕ ಶಿಕ್ಷಣ | ಸದಸ್ಯರು |
| 29. | ಶ್ರೀ ಶ್ರೀಕಾಂತ್ ಕೆ.ಎಸ್. ಹಣಕಾಸು ಅಧಿಕಾರಿಗಳು | ವಿಶೇಷ ಆಹ್ವಾನಿತರು |

**ಗೈರುಹಾಜರಾದ ಸದಸ್ಯರು:**

| | | |
|---|---|---|
| 1. | ಶ್ರೀ ಹೆಚ್.ಡಿ. ತಮ್ಮಯ್ಯ, ಶಾಸಕರು, ಚಿಕ್ಕಮಗಳೂರು ಕ್ಷೇತ್ರ | ಸದಸ್ಯರು |
| 2. | ಶ್ರೀ ಬಿ.ಕೆ. ಸಂಗಮೇಶ್ವರ, ಶಾಸಕರು, ಭದ್ರಾವತಿ | ಸದಸ್ಯರು |
| 3. | ಶ್ರೀ ಸೂರಜ್ ರೇವಣ್ಣ, ಶಾಸಕರು, ಕರ್ನಾಟಕ ವಿಧಾನ ಪರಿಷತ್ | ಸದಸ್ಯರು |
| 4. | ಡಾ. ಜಿ. ಪ್ರಶಾಂತ ನಾಯಕ, ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶಕರು | ಸದಸ್ಯರು |

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.



Scanned with OKEN Scanner

5. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು. ಸದಸ್ಯರು
6. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು. ಸದಸ್ಯರು
7. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು. ಸದಸ್ಯರು
8. ಆಯುಕ್ತರು, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು. ಸದಸ್ಯರು

**ಪ್ರಸ್ತಾವನೆ:** ಪ್ರಾರಂಭದಲ್ಲಿ ಸಭೆಗೆ ಆಗಮಿಸಿದ ಸದಸ್ಯರುಗಳೆಲ್ಲರಿಗೂ ಮಾನ್ಯ ಕುಲಸಚಿವರು ಆತ್ಮೀಯವಾಗಿ ಸ್ವಾಗತ ಕೋರಿದರು. ಹಾಗೂ ಪ್ರಾಧ್ಯಾಪಕರ ಜ್ಯೇಷ್ಠತೆ ಹಾಗೂ ಸರದಿಯ ಮೇಲೆ ಪ್ರಾಧ್ಯಾಪಕರ ಕೋಟಾದಲ್ಲಿ ವಿದ್ಯಾವಿಷಯಕ ಪರಿಷತ್ ಸದಸ್ಯರಾಗಿ ಮಾನ್ಯ ಕುಲಪತಿಯವರಿಂದ ನಾಮನಿರ್ದೇಶನಗೊಂಡಿರುವ ಪ್ರೊ.ಯಾದವ್ ದಶರಥರಾವ್ ಬೋಡ್ಕೆ, ಪ್ರಾಧ್ಯಾಪಕರು, ಸ್ನಾತಕೋತ್ತರ ರಸಾಯನಶಾಸ್ತ್ರ ವಿಭಾಗ ಹಾಗೂ ಜ್ಯೇಷ್ಠತೆಯನುಸಾರ ಪ್ರಾಂಶುಪಾಲರ ಕೋಟಾದಲ್ಲಿ ಮಾನ್ಯ ಕುಲಪತಿಯವರಿಂದ ನಾಮನಿರ್ದೇಶನಗೊಂಡ ಡಾ.ಧನಂಜಯ, ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಎನ್.ಆರ್.ಪುರ ಇವರನ್ನು ಆತ್ಮೀಯವಾಗಿ ಸ್ವಾಗತಿಸಿದರು.

ಪ್ರಾಧ್ಯಾಪಕರ ಜ್ಯೇಷ್ಠತೆ ಮತ್ತು ಸರದಿಯ ಮೇಲೆ ಮಾನ್ಯ ಕುಲಪತಿಯವರಿಂದ ನಾಮನಿರ್ದೇಶನಗೊಂಡು ಕಾರ್ಯನಿರ್ವಹಿಸಿ ವಿದ್ಯಾವಿಷಯಕ ಪರಿಷತ್ ಸದಸ್ಯತ್ವದಿಂದ ಬಿಡುಗಡೆ ಹೊಂದಿರುವ ಪ್ರೊ.ನಮ್ರತಾ.ಎಂ, ಪ್ರಾಧ್ಯಾಪಕರು, ಸ್ನಾತಕೋತ್ತರ ಇಂಗ್ಲೀಷ್ ವಿಭಾಗ ಮತ್ತು ಜ್ಯೇಷ್ಠತೆಯನುಸಾರ ಪ್ರಾಂಶುಪಾಲರ ಕೋಟಾದಲ್ಲಿ ನಾಮನಿರ್ದೇಶನಗೊಂಡು ಕಾರ್ಯನಿರ್ವಹಿಸಿ ವಿದ್ಯಾವಿಷಯಕ ಪರಿಷತ್ ಸದಸ್ಯತ್ವದಿಂದ ಬಿಡುಗಡೆಹೊಂದಿರುವ ಡಾ.ರಾಜಣ್ಣ.ಕೆ.ಎ, ಪ್ರಾಂಶುಪಾಲರು, ಸಕಾರಿ ಪ್ರಥಮ ದರ್ಜೆ ಕಾಲೇಜು, ಕಡೂರು ಇವರುಗಳ ಸೇವೆಯನ್ನು ಸ್ಮರಿಸಿ ಆತ್ಮೀಯವಾಗಿ ಬೀಳ್ಕೊಡಲಾಯಿತು. ನಂತರ ಕಾರ್ಯಸೂಚಿಯನ್ನು ಕೈಗೆತ್ತಿಕೊಳ್ಳಲಾಯಿತು.

## ಶೈಕ್ಷಣಿಕ ವಿಭಾಗ

**2026:ಎಸಿ–3.01:** "ಸೋಮಶೇಖರ ಪಿ.ಸಿ. ಬಿನ್ ಪರಶುರಾಮಪ್ಪ ಬಿ.ಹೆಚ್., ನಿವೃತ್ತ ಹಿರಿಯ ಸಹಾಯಕ, ಕುವೆಂಪು ವಿಶ್ವವಿದ್ಯಾಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ" ಇವರ ಹೆಸರಿನಲ್ಲಿ ದತ್ತಿನಿಧಿ ಸ್ವರ್ಣ ಪದಕ ಸ್ಥಾಪನೆ ಬಗ್ಗೆ.

**ಚರ್ಚೆ:** ಕುಲಸಚಿವರು ವಿಷಯ ಮಂಡಿಸಿ ಮಾತನಾಡಿ "ಸೋಮಶೇಖರ ಪಿ.ಸಿ. ಬಿನ್ ಪರಶುರಾಮಪ್ಪ ಬಿ.ಹೆಚ್., ನಿವೃತ್ತ ಹಿರಿಯ ಸಹಾಯಕ, ಕುವೆಂಪು ವಿಶ್ವವಿದ್ಯಾಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ" ಇವರ ಹೆಸರಿನಲ್ಲಿ ದತ್ತಿನಿಧಿ ಸ್ವರ್ಣ ಪದಕ ಸ್ಥಾಪನೆಯ ಬಗ್ಗೆ ದಿನಾಂಕ:10-06-2026ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆಯಾಗಿದ್ದು ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆಗೆ ಮಂಡಿಸಿದೆ ಎಂದರು.

**ನಿರ್ಣಯ:** 2025-26ನೇ ಶೈಕ್ಷಣಿಕ ಸಾಲಿನಿಂದ ಕುವೆಂಪು ವಿಶ್ವವಿದ್ಯಾಲಯದ ಶಿಕ್ಷಣ ನಿಕಾಯದ ಸ್ನಾತಕೋತ್ತರ ದೈಹಿಕ ಶಿಕ್ಷಣ ಅಧ್ಯಯನ ವಿಭಾಗದಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿ/ವಿದ್ಯಾರ್ಥಿನಿಗೆ "ಸೋಮಶೇಖರ ಪಿ.ಸಿ. ಬಿನ್ ಪರಶುರಾಮಪ್ಪ ಬಿ.ಹೆಚ್., ನಿವೃತ್ತ ಹಿರಿಯ ಸಹಾಯಕ, ಕುವೆಂಪು ವಿಶ್ವವಿದ್ಯಾಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ" ಇವರ ಹೆಸರಿನಲ್ಲಿ ದತ್ತಿನಿಧಿ ಸ್ವರ್ಣ ಪದಕವನ್ನು ನೀಡುವ ಸಂಬಂಧ, ದತ್ತಿ ನಿಧಿ ಸ್ವರ್ಣ ಪದಕವನ್ನು ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸಲು ವಿದ್ಯಾವಿಷಯಕ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ ಕೈಗೊಂಡ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.



Scanned with OKEN Scanner

**2026:ಎಸಿ–3.02:** "Smt Mythradevi B S Yadiyurappa Memorial Young Researcher Award" Gold Medal" ದತ್ತಿನಿಧಿ ಸ್ವರ್ಣ ಪದಕ ಸ್ಥಾಪನೆ ಬಗ್ಗೆ.

**ಚರ್ಚೆ:** ಕುಲಸಚಿವರು ವಿಷಯ ಮಂಡಿಸಿ ಮಾತನಾಡಿ "Smt Mythradevi B S Yadiyurappa Memorial Young Researcher Award" Gold Medal" ಇವರ ಹೆಸರಿನಲ್ಲಿ ದತ್ತಿನಿಧಿ ಸ್ವರ್ಣ ಪದಕ ಸ್ಥಾಪನೆಯ ಬಗ್ಗೆ ದಿನಾಂಕ:10-06-2026ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆಯಾಗಿದ್ದು ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆಗೆ ಮಂಡಿಸಿದೆ ಎಂದರು.

**ನಿರ್ಣಯ:** 2025–26ನೇ ಶೈಕ್ಷಣಿಕ ಸಾಲಿನಿಂದ ಕುವೆಂಪು ವಿಶ್ವವಿದ್ಯಾಲಯದ ಸ್ನಾತಕೋತ್ತರ ಪದವಿಯ ಎಂ.ಎಸ್ಸಿ. ಪರಿಸರ ವಿಜ್ಞಾನ ವಿಷಯದಲ್ಲಿ Research Project ನಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿ/ನಿಗೆ "Smt Mythradevi B S Yadiyurappa Memorial Young Researcher Award" Gold Medal" ಸ್ವರ್ಣಪದಕ ಪ್ರದಾನ ಮಾಡುವ ಬಗ್ಗೆ ದತ್ತಿ ನಿಧಿ ಸ್ವರ್ಣ ಪದಕವನ್ನು ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸಲು ವಿದ್ಯಾವಿಷಯಕ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ ಕೈಗೊಂಡ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

**2026:ಎಸಿ–3.03:** 2026–27ನೇ ಶೈಕ್ಷಣಿಕ ಸಾಲಿನಿಂದ ಎಲ್ಲಾ ಸ್ನಾತಕೋತ್ತರ ಪದವಿ ಹಾಗೂ ಇತರೆ ಪ್ರಮಾಣ ಪತ್ರಗಳ ಶುಲ್ಕವನ್ನು ಪರಿಷ್ಕರಣೆ ಮಾಡುವ ಕುರಿತು.

**ಚರ್ಚೆ:** ವಿಷಯ ಮಂಡಿಸಿ ಮಾತನಾಡಿದ ಕುಲಸಚಿವರು, ವಿಶ್ವವಿದ್ಯಾಲಯದ 2026–27ನೇ ಶೈಕ್ಷಣಿಕ ಸಾಲಿನಿಂದ ಎಲ್ಲಾ ಸ್ನಾತಕೋತ್ತರ ಪದವಿ ಹಾಗೂ ಇತರೆ ಪ್ರಮಾಣ ಪತ್ರಗಳ ಶುಲ್ಕಗಳ ಪರಿಷ್ಕರಣೆಗೆ ರಚಿಸಲಾದ ಸಮಿತಿಯು ಕಳೆದ ವರ್ಷದ ಶುಲ್ಕಕ್ಕೆ 30% ಮತ್ತು ಇತರೆ ಪ್ರಮಾಣ ಪತ್ರಗಳ ಶುಲ್ಕಗಳನ್ನು 10% ಹೆಚ್ಚಿಸಿ ಶಿಫಾರಸ್ಸು ಮಾಡಿರುವುದನ್ನು ಈಗಾಗಲೇ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ ಪ್ರಸ್ತುತ ಶಿಕ್ಷಣ ಮಂಡಳಿ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ ಎಂದರು.

ಪ್ರೊ.ಜಿ.ಜೆ.ಸತೀಶ್ ರವರು ಮಾತನಾಡಿ, ಕಳೆದ ವರ್ಷದಲ್ಲಿ 30% ಹೆಚ್ಚಿಸಿರುವುದರಿಂದ ಪುನ: ಶುಲ್ಕಗಳನ್ನು ಪರಿಷ್ಕರಿಸಿದಲ್ಲಿ ವಿದ್ಯಾರ್ಥಿಗಳ ಪ್ರವೇಶದಲ್ಲಿ ಕುಂಠಿತವಾಗುವುದು ಎಂದರು. ಹಾಗೂ ಕಳೆದ ವರ್ಷ ಶುಲ್ಕ ಹೆಚ್ಚಿಸಿರುವುದರಿಂದ ಅದನ್ನೇ ಮುಂದುವರೆಸುವುದು ಸೂಕ್ತವೆಂದರು.

ಸದಸ್ಯರಾದ ಡಾ.ಸಂಧ್ಯಾಕಾವೇರಿಯವರು ಮಾತನಾಡಿ ಒಂದೇ ಸಲ ಶುಲ್ಕ ಹೆಚ್ಚು ಮಾಡುವ ಬದಲು ಒಮ್ಮೆ ಶುಲ್ಕ ಪರಿಷ್ಕರಣೆಯಾದಲ್ಲಿ ಅದನ್ನು 02 ವರ್ಷ ಮುಂದುವರೆಸುವುದು ಸೂಕ್ತವೆಂದರು ಅದೇ ರೀತಿಯಲ್ಲಿ ಪಠ್ಯಕ್ರಮವೂ ಬದಲಾಗಬೇಕೆಂದರು.

ಕುಲಸಚಿವರು ಮಾತನಾಡಿ ಶುಲ್ಕದ ವಿಷಯದಲ್ಲಿ ಆಯಾಯ ಸಂದರ್ಭಕ್ಕೆ ಪರಿಸ್ಥಿತಿಯನ್ನು ಅವಲೋಕಿಸಿ ವಿನಾಯಿತಿ ಅಥವಾ ಶುಲ್ಕದ ಪ್ರಮಾಣವನ್ನು ಸಡಿಲಿಸುವ ಬಗ್ಗೆ ನಿರ್ಧಾರ ಕೈಗೊಳ್ಳುವುದು ಸೂಕ್ತವೆಂದರು.

ಇದಕ್ಕೆ ಉತ್ತರಿಸಿದ ಕುಲಸಚಿವರು ಕೇವಲ ಶುಲ್ಕ ಹೆಚ್ಚಳ ಕಾರಣಗಳಿಂದ ವಿದ್ಯಾರ್ಥಿಗಳ ಪ್ರವೇಶ ಕಡಿಮೆಯಾಗುತ್ತದೆ ಎಂಬುದನ್ನು ಒಪ್ಪಲು ಸಾಧ್ಯವಿಲ್ಲ. ಕಾರಣ ನಮ್ಮ ವಿಶ್ವವಿದ್ಯಾಲಯದ ಪಠ್ಯಕ್ರಮವು ಇಂದಿನ ಜಾಗತಿಕ ಅಗತ್ಯಗಳಿಗೆ ಅನುಗುಣವಾಗಿ ಪರಿಷ್ಕರಣೆ ಆಗಬೇಕು. ಇಂದಿನ ಜಾಗತೀಕರಣ, ತಂತ್ರಜ್ಞಾನ ಮತ್ತು ವೇಗವಾಗಿ ಬದಲಾಗುತ್ತಿರುವ ಸಮಾಜದ ಅಗತ್ಯಗಳನ್ನು ಗಮನದಲ್ಲಿಟ್ಟುಕೊಂಡು



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

Scanned with OKEN Scanner

ವಿದ್ಯಾರ್ಥಿಗಳಿಗೆ ರೂಪಿಸುವ ಪಠ್ಯಕ್ರಮವು ಕೇವಲ ಪಠ್ಯಜ್ಞಾನವನ್ನು ನೀಡುವುದಕ್ಕೆ ಸೀಮಿತವಾಗಿರಬಾರದು ಬದಲಾಗಿ ಜೀವನ ಕೌಶಲ್ಯಗಳು, ಮೌಲ್ಯಗಳು, ಸೃಜನಶೀಲತೆ, ಸಮಸ್ಯೆ ಪರಿಹಾರ ಸಾಮರ್ಥ್ಯ ಹಾಗೂ ಉದ್ಯೋಗಾರ್ಹತೆಯನ್ನು ಬೆಳೆಸುವಂತಿರಬೇಕು.

ಪಠ್ಯಕ್ರಮ ರಚನೆಯಲ್ಲಿ ವಿಮರ್ಶಾತ್ಮಕ ಚಿಂತನೆ, ಸೃಜನಾತ್ಮಕತೆ, ಸಂವಹನ ಕೌಶಲ್ಯ, ತಂಡದೊಂದಿಗೆ ಕೆಲಸ ಮಾಡುವ ಸಾಮರ್ಥ್ಯ, ಡಿಜಿಟಲ್ ಸಾಕ್ಷರತೆ ಹಾಗೂ ಕೃತಕ ಬುದ್ಧಿಮತ್ತೆ (AI) ಕುರಿತ ಮೂಲಭೂತ ಜ್ಞಾನವನ್ನು ಒಳಗೊಂಡಿರಬೇಕು ಎಂದರು.

ಮಾನ್ಯ ಕುಲಪತಿಗಳು ಮಾತನಾಡಿ ಕುಲಸಚಿವರು ನೀಡಿರುವ ಸಲಹೆಗಳು ಉತ್ತಮ ರೀತಿಯಲ್ಲಿದ್ದು ಇದು ಒಪ್ಪುವಂತಹ ಸಲಹೆಯಾಗಿದೆ. ಆದರೆ ಪಠ್ಯಕ್ರಮವು ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳು ಅಳವಡಿಸಿರುವಂತೆ ನಮ್ಮ ವಿಶ್ವವಿದ್ಯಾಲಯವೂ ಸಹ ಅಳವಡಿಸಿಕೊಂಡಿದೆ ಎಂದರು.

ಇದಕ್ಕೆ ಉತ್ತರಿಸಿದ ಕುಲಸಚಿವರು ಪ್ರಸ್ತುತ ಜಾಗತಿಕ ಸನ್ನಿವೇಶಗಳಿಗೆ ಅನುಗುಣವಾಗಿ New Advanced Syllbus ಪರಿಷ್ಕರಿಸಿ ಅದರಂತೆ ಅತಿಥಿ ಉಪನ್ಯಾಸಕರನ್ನು ನೇಮಿಸುವುದು ಸೂಕ್ತವೆಂದರು.

ಕುಲಸಚಿವರು ಮಾತನಾಡಿ ವಿಶ್ವವಿದ್ಯಾಲಯದ ಎಲ್ಲಾ ಡೀನರುಗಳು, ಪ್ರಾಧ್ಯಾಪಕರುಗಳು ಪ್ರಸ್ತುತ ಬದಲಾದ ಜಾಗತಿಕ ಮಟ್ಟದ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಆಗುತ್ತಿರುವ ಬದಲಾವಣೆಗೆ ಅನುಗುಣವಾಗಿ ಪಠ್ಯಕ್ರಮ ಪರಿಷ್ಕರಣೆ ಆಗಬೇಕು ಎಂದರು.

ಕುಲಪತಿಗಳು ಮಾತನಾಡಿ ಇಂದಿನ AI ಯುಗದಲ್ಲಿ ಪ್ರಸ್ತುತ ಪಠ್ಯಕ್ರಮವು ಪರಿಷ್ಕರಣೆ ಆಗುವುದು ಸೂಕ್ತವೆಂದರು.

ಕಲಾ ನಿಕಾಯದ ಡೀನರಾದ ಪ್ರೊ.ಚಂದ್ರಶೇಖರ್ ಇವರು ಮಾತನಾಡಿ ಪಠ್ಯಕ್ರಮ ಬದಲಾವಣೆ ಅಥವಾ ಪರಿಷ್ಕರಣೆ ಕುರಿತು ಎಲ್ಲಾ ಡೀನರು ಮತ್ತು ಅಧ್ಯಯನ ಮಂಡಳಿಗಳ ಅಧ್ಯಕ್ಷರುಗಳ ಒಂದು ಕಾರ್ಯಾಗಾರವಾಗಬೇಕೆಂದರು.

ಕಲಾ ನಿಕಾಯದ ಡೀನರು ಮಾತನಾಡಿ ಕರ್ನಾಟಕ ರಾಜ್ಯ ಅಂತರ ವಿಶ್ವವಿದ್ಯಾಲಯದ ಮಂಡಳಿ ಯಲ್ಲಿ ಇಡೀ ರಾಜ್ಯಕ್ಕೆ ಅನ್ವಯವಾಗುವ ಪಠ್ಯಕ್ರಮ ಸಿದ್ಧಪಡಿಸಲಾಗಿದ್ದು ಇದರಲ್ಲಿ 30% ಮಾತ್ರ ವಿಶ್ವವಿದ್ಯಾಲಯಗಳು ಬದಲಾವಣೆಗೆ ಅವಕಾಶವಿರುತ್ತದೆ ಎಂದರು.

ಇದಕ್ಕೆ ಉತ್ತರಿಸಿದ ಕುಲಸಚಿವರು 30% ನಲ್ಲಿ ಅಗತ್ಯವಾದ ಬದಲಾವಣೆ ಮಾಡಲು ಅವಕಾಶವಿದೆ ಎಂದರು.

ಸದಸ್ಯರಾದ ಡಾ.ಗಣೇಶ್ ಇವರು ಮಾತನಾಡಿ ಬಿ.ಇಡಿ ಪಠ್ಯಕ್ರಮವು ಅಪ್‌ಡೇಟ್ ಇದೆ ಆದರೆ ವಿದ್ಯಾರ್ಥಿಗಳು ನಿರಂತರ ತರಗತಿಗೆ ಬರಲು ಆಸಕ್ತಿ ಹೊಂದಿಲ್ಲವೆಂದರು.

ಕುಲಸಚಿವರು ಮಾತನಾಡಿ ಅನ್ಯವಿಶ್ವವಿದ್ಯಾಲಯ, ಖಾಸಗಿ ವಿಶ್ವವಿದ್ಯಾಲಯಗಳು ಹಾಗೂ ಇತರೆ ಉನ್ನತ ಶಿಕ್ಷಣ ಸಂಸ್ಥೆಗಳ ಪಠ್ಯಕ್ರಮವನ್ನು ಪರಿಶೀಲಿಸಿ ನಮ್ಮ ವಿಶ್ವವಿದ್ಯಾಲಯದ ಪಠ್ಯಕ್ರಮದಲ್ಲಿ ಆಗಬೇಕಾದ ಬದಲಾವಣೆಗಳ ಕುರಿತು ಪಠ್ಯಕ್ರಮವನ್ನು ಆದಷ್ಟು ಶೀಘ್ರವಾಗಿ ಪರಿಷ್ಕರಿಸುವಂತೆ ಸಲಹೆ ನೀಡಿದರು.

R. ...
ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.



Scanned with OKEN Scanner

ಸದಸ್ಯರಾದ ಶ್ರೀ ಡಿ.ಎಸ್.ಅರುಣ್ ವಿಧಾನ ಪರಿಷತ್ ಸದಸ್ಯರು ಇವರು ಮಾತನಾಡಿ ಇದುವರೆಗಿನ ಚರ್ಚೆ ಬಹಳ ಅರ್ಥಪೂರ್ಣ ಮತ್ತು ಇಂದಿನ ಜಾಗತಿಕ ಮಟ್ಟದ ಬದಲಾವಣೆಗೆ ಅನುಸಾರವಾಗಿ ಪಠ್ಯಕ್ರಮ ಬದಲಾವಣೆ ಆಗಬೇಕು ಹಾಗೂ ಇದು ಆಯಾಯ ಸ್ನಾತಕ ಮತ್ತು ಸ್ನಾತಕೋತ್ತರ ಅಧ್ಯಯನ ಮಂಡಳಿಯ ಸಭೆಗಳಲ್ಲಿ ಉತ್ತಮ ರೀತಿಯಲ್ಲಿ ಚರ್ಚಿಸಿ ನಿರ್ಧಾರ ಕೈಗೊಳ್ಳುವುದು ಸೂಕ್ತವೆಂದರು.

ಕಲಾ ನಿಕಾಯದ ಡೀನರಾದ ಪ್ರೊ.ಚಂದ್ರಶೇಖರ ಇವರು ಮಾತನಾಡಿ ಇದೇ ವಿಷಯದ ಬಗ್ಗೆ ಚರ್ಚಿಸಲು ಎಲ್ಲಾ ಅಧ್ಯಯನ ಮಂಡಳಿಗಳ ಅಧ್ಯಕ್ಷರುಗಳ ಸಭೆಯನ್ನು ಏರ್ಪಡಿಸುವುದು ಸೂಕ್ತವೆಂದರು.

**ನಿರ್ಣಯ:** ಸುಧೀರ್ಘ ಚರ್ಚೆಯ ನಂತರ ಪ್ರಸ್ತುತ ಇರುವ ಎಲ್ಲಾ ವಿಷಯಗಳ ಪಠ್ಯಕ್ರಮಗಳಿಗೆ ಸಂಬಂಧಿಸಿದಂತೆ ಕಾರ್ಯಾಗಾರವನ್ನು ಏರ್ಪಡಿಸಿ ಆದಷ್ಟು ಬೇಗ ನಿಗದಿತ ಸಮಯದಲ್ಲಿ ಪಠ್ಯಕ್ರಮಗಳು ಸೆಪ್ಟಂಬರ್ ಒಳಗೆ ಪರಿಷ್ಕರಣೆ ಮಾಡಲು ಹಾಗೂ ಶುಲ್ಕಗಳನ್ನು ಪರಿಷ್ಕರಣೆ ಮಾಡಲು ತಾತ್ವಿಕವಾಗಿ ಒಪ್ಪಿ ಆಯಾಯ ಸಂದರ್ಭಕ್ಕೆ ಅನುಸಾರವಾಗಿ ಅಗತ್ಯವಿದ್ದಲ್ಲಿ ಶುಲ್ಕದಲ್ಲಿ ವಿನಾಯಿತಿ ನೀಡುವ ಬಗ್ಗೆ ನಿರ್ಧಾರ ಕೈಗೊಳ್ಳಲು ನಿರ್ಣಯಿಸಲಾಯಿತು.

**2026:ಎಸಿ–3.04:** ವಿಶ್ವವಿದ್ಯಾಲಯದ ನೇರ ಆಡಳಿತಕ್ಕೊಳಪಟ್ಟ ಕಾಲೇಜಾಗಿರುವ ವಿಶ್ವವಿದ್ಯಾಲಯ ಶ್ರೀಮದ್ ರಂಭಾಪುರಿ ಕಲಾ ಮತ್ತು ವಾಣಿಜ್ಯ ಕಾಲೇಜಿನಲ್ಲಿ ಈಗಿರುವ ಐಚ್ಛಿಕ ವಿಷಯಗಳ ಜೊತೆಗೆ ಹೊಸದಾಗಿ ಯು.ಯು.ಸಿ.ಎಂ.ಎಸ್.ನ ಪೋರ್ಟಲ್‌ನಲ್ಲಿ 01 ಐಚ್ಛಿಕ ವಿಷಯ ಗುಚ್ಛ ಮತ್ತು ಬಿ.ಸಿ.ಎ. ಕೋರ್ಸ್‌ಗೆ ಹೆಚ್ಚುವರಿ ಸೀಟುಗಳನ್ನು ಅನುಮೋದಿಸುವ ಕುರಿತು.

**ಚರ್ಚೆ:** ವಿಷಯ ಮಂಡಿಸಿ ಮಾತನಾಡಿದ ಕುಲಸಚಿವರು ವಿಶ್ವವಿದ್ಯಾಲಯದ ನೇರ ಆಡಳಿತಕ್ಕೊಳಪಟ್ಟ ಶ್ರೀಮದ್ ರಂಭಾಪುರಿ ಕಲಾ ಮತ್ತು ವಾಣಿಜ್ಯ ಕಾಲೇಜಿನಲ್ಲಿ ವಿದ್ಯಾರ್ಥಿಗಳ ಬೇಡಿಕೆಗಳಿಗೆ ಅನುಸಾರವಾಗಿ ಕಲಾ ವಿಭಾಗದಲ್ಲಿ ಒಂದು ಐಚ್ಛಿಕ ವಿಷಯ ಗುಚ್ಛವನ್ನು ಹೊಸದಾಗಿ ನೀಡಲು ಹಾಗೂ ಬಿ.ಸಿ.ಎ ಪದವಿಗೆ ಹಚ್ಚುವರಿ ಪ್ರವೇಶ ಮಿತಿಯನ್ನು ನೀಡಿರುವುದಕ್ಕೆ ಸ್ಥಿರೀಕರಣಕ್ಕಾಗಿ ಮಂಡಿಸಲಾಗಿದೆ ಎಂದರು.

ಸಭೆಯಲ್ಲಿ ಕಾಲೇಜಿನ ಪ್ರಾಂಶುಪಾಲರನ್ನು ಕರೆಸಿ ಬಿಸಿಎ ಕೋರ್ಸಿಗೆ ಹೆಚ್ಚುವರಿ ಪ್ರವೇಶಕ್ಕೆ ಸಂಬಂಧಿಸಿದಂತೆ ಅಗತ್ಯವಾದ ಗಣಕ ಯಂತ್ರ ಮತ್ತು ಮೂಲಭೂತ ಸೌಲಭ್ಯಗಳ ಬಗ್ಗೆ ಮಾಹಿತಿ ಪಡೆಯಲಾಯಿತು.

**ನಿರ್ಣಯ:** ಚರ್ಚೆಯ ನಂತರ ವಿಶ್ವವಿದ್ಯಾಲಯದ ನೇರ ಆಡಳಿತಕ್ಕೊಳಪಟ್ಟ ಕಾಲೇಜು ಆಗಿರುವ ವಿಶ್ವವಿದ್ಯಾಲಯ ಶ್ರೀಮದ್ ರಂಭಾಪುರಿ ಕಲಾ ಮತ್ತು ವಾಣಿಜ್ಯ ಕಾಲೇಜಿನಲ್ಲಿ ಕನಿಷ್ಠ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಷರತ್ತಿಗೊಳಪಟ್ಟು ಈಗಿರುವ ಐಚ್ಛಿಕ ವಿಷಯಗಳ ಜೊತೆಗೆ ಹೊಸದಾಗಿ ಯು.ಯು.ಸಿ.ಎಂ.ಎಸ್.ನ ಪೋರ್ಟಲ್‌ನಲ್ಲಿ ಕಲಾ ವಿಭಾಗದಲ್ಲಿ 01 ಐಚ್ಛಿಕ ವಿಷಯ ಗುಚ್ಛ ಮತ್ತು ಬಿ.ಸಿ.ಎ. ಕೋರ್ಸ್‌ಗೆ ಒಟ್ಟಾರೆ 140 ಸೀಟುಗಳ ಬದಲಿಗೆ 120 ಸೀಟುಗಳಿಗೆ ಸೀಮಿತಗೊಳಿಸಿ ಸೇರ್ಪಡೆಗೊಳಿಸಲು ಅನುಮೋದಿಸಿ, ಈ ಬಗ್ಗೆ ವಿದ್ಯಾವಿಷಯಕ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ, ಮಾನ್ಯ ಕುಲಪತಿಗಳ ಅನುಮೋದನೆಯ ಮೇರೆಗೆ ವಿಶ್ವವಿದ್ಯಾಲಯವು ಕೈಗೊಂಡ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

K. R.
ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.



Scanned with OKEN Scanner

**2026:ಎಸಿ–3.05:** ವಿಶ್ವವಿದ್ಯಾಲಯದ ಘಟಕ ಕಾಲೇಜು ಆಗಿರುವ ಸಹ್ಯಾದ್ರಿ ಕಲಾ ಕಾಲೇಜಿನಲ್ಲಿ ಈಗಿರುವ ಐಚ್ಛಿಕ ವಿಷಯಗಳ ಜೊತೆಗೆ ಹೊಸದಾಗಿ ಯು.ಯು.ಸಿ.ಎಂ.ಎಸ್.ನ ಪೋರ್ಟಲ್‌ನಲ್ಲಿ 05 ಐಚ್ಛಿಕ ವಿಷಯ ಗುಚ್ಛಗಳನ್ನು ಸೇರ್ಪಡೆಗೊಳಿಸುವ ಕುರಿತು.

**ಚರ್ಚೆ:** ವಿಷಯ ಮಂಡಿಸಿ ಮಾತನಾಡಿದ ಕುಲಸಚಿವರು ವಿಶ್ವವಿದ್ಯಾಲಯದ ಘಟಕ ಕಾಲೇಜಾದ ಸಹ್ಯಾದ್ರಿ ಕಲಾ ಕಾಲೇಜಿನಲ್ಲಿ ವಿದ್ಯಾರ್ಥಿಗಳ ಬೇಡಿಕೆಗಳಿಗೆ ಅನುಸಾರವಾಗಿ 05 ಐಚ್ಛಿಕ ವಿಷಯ ಸಮೂಹಗಳನ್ನು ನೀಡಿರುವುದಕ್ಕೆ ಸ್ಥಿರೀಕರಣಕ್ಕಾಗಿ ಮಂಡಿಸಲಾಗಿದೆ ಎಂದರು.

**ನಿರ್ಣಯ:** ವಿಶ್ವವಿದ್ಯಾಲಯದ ಘಟಕ ಕಾಲೇಜು ಆಗಿರುವ ಸಹ್ಯಾದ್ರಿ ಕಲಾ ಕಾಲೇಜಿನಲ್ಲಿ ಈಗಿರುವ ಐಚ್ಛಿಕ ವಿಷಯಗಳ ಜೊತೆಗೆ ಹೊಸದಾಗಿ ಯು.ಯು.ಸಿ.ಎಂ.ಎಸ್.ನ ಪೋರ್ಟಲ್‌ನಲ್ಲಿ 05 ಐಚ್ಛಿಕ ವಿಷಯ ಗುಚ್ಛಗಳನ್ನು ಸೇರ್ಪಡೆಗೊಳಿಸಲು ಸಭೆಯು ಅನುಮತಿಸಿತು.

**2026:ಎಸಿ–3.05(ಎ):** ವಿಶ್ವವಿದ್ಯಾಲಯದ 2026–27ನೇ ಶೈಕ್ಷಣಿಕ ಸಾಲಿನ ಸ್ನಾತಕ ಪದವಿಗಳಿಗೆ ಸಂಬಂಧಿಸಿದ ಶೈಕ್ಷಣಿಕ ವೇಳಾಪಟ್ಟಿಯ ಕುರಿತು.

**ಚರ್ಚೆ:** ವಿಷಯ ಮಂಡಿಸಿದ ಕುಲಸಚಿವರು, 2026–27ನೇ ಸಾಲಿನ ಸ್ನಾತಕ ಪದವಿಗಳ ಶೈಕ್ಷಣಿಕ ವೇಳಾಪಟ್ಟಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ ಪರಿಚಲಿಸಿರುವುದನ್ನು ಸಭೆಯ ಸ್ಥಿರೀಕರಣ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ ಎಂದರು. ಕೆಲವು ಸದಸ್ಯರುಗಳು ಕ್ರಮ ಸಂಖ್ಯೆ 05 ರ 1, 3 ಮತ್ತು 5ನೇ ಸೆಮಿಸ್ಟರ್ ಮುಕ್ತಾಯದ ದಿನಾಂಕವನ್ನು ದಿನಾಂಕ:21–10–2026 ರ ಬದಲಿಗೆ 28–10–2026 ಎಂದು ಕ್ರಮ ಸಂಖ್ಯೆ 6 ರ ಪರೀಕ್ಷೆ ಮತ್ತು ಮೌಲ್ಯಮಾಪನದ ದಿನಾಂಕವನ್ನು ಒಂದು ವಾರದವರೆಗೆ ಮುಂದೂಡುವಂತೆ ಕೋರಿದರು.

**ನಿರ್ಣಯ:** ಚರ್ಚೆಯ ನಂತರ ವಿಶ್ವವಿದ್ಯಾಲಯದ 2026–27ನೇ ಶೈಕ್ಷಣಿಕ ಸಾಲಿನ ಸ್ನಾತಕ ಪದವಿಗಳಿಗೆ ಸಂಬಂಧಿಸಿದ ಶೈಕ್ಷಣಿಕ ವೇಳಾಪಟ್ಟಿಯಲ್ಲಿನ ಕ್ರಮ ಸಂಖ್ಯೆ 05 ರ 1, 3 ಮತ್ತು 5ನೇ ಸೆಮಿಸ್ಟರ್ ಮುಕ್ತಾಯದ ದಿನಾಂಕವನ್ನು ದಿನಾಂಕ:21–10–2026 ರ ಬದಲಿಗೆ 28–10–2026 ಎಂದು ಕ್ರಮ ಸಂಖ್ಯೆ 6 ರ ಪರೀಕ್ಷೆ ಮತ್ತು ಮೌಲ್ಯಮಾಪನದ ದಿನಾಂಕವನ್ನು ದಿನಾಂಕ:22–10–2026 ರಿಂದ ಎಂಬುದನ್ನು ದಿನಾಂಕ:29–10–2026 ಎಂದು ತಿದ್ದುಪಡಿ ಮಾಡಿ ಉಳಿದಂತೆ ಯಥಾವತ್ತಾಗಿ ಅನುಮೋದಿಸಲಾಯಿತು.

**2026:ಎಸಿ–3.05(ಬಿ):** "ಸೋಮಶೇಖರ ಪಿ.ಸಿ. ಬಿನ್ ಪರಶುರಾಮಪ್ಪ ಬಿ.ಹೆಚ್., ನಿವೃತ್ತ ಹಿರಿಯ ಸಹಾಯಕ, ಕುವೆಂಪು ವಿಶ್ವವಿದ್ಯಾಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ" ಇವರ ಹೆಸರಿನಲ್ಲಿ ದತ್ತಿನಿಧಿ ಸ್ವರ್ಣ ಪದಕ ಸ್ಥಾಪನೆ ಬಗ್ಗೆ.

**ಚರ್ಚೆ:** ಕುಲಸಚಿವರು ವಿಷಯ ಮಂಡಿಸಿ ಮಾತನಾಡಿ ಸೋಮಶೇಖರ ಪಿ.ಸಿ. ಬಿನ್ ಪರಶುರಾಮಪ್ಪ ಬಿ.ಹೆಚ್., ನಿವೃತ್ತ ಹಿರಿಯ ಸಹಾಯಕ, ಕುವೆಂಪು ವಿಶ್ವವಿದ್ಯಾಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ ಇವರ ಹೆಸರಿನಲ್ಲಿ ದತ್ತಿನಿಧಿ ನಗದು ಬಹುಮಾನವನ್ನು ಸ್ಥಾಪನೆಯ ಬಗ್ಗೆ ದಿನಾಂಕ:10–06–2026ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆಯಾಗಿದ್ದು ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆಗೆ ಮಂಡಿಸಿದೆ ಎಂದರು.

**ನಿರ್ಣಯ:** 2025–26ನೇ ಶೈಕ್ಷಣಿಕ ಸಾಲಿನಿಂದ ಕುವೆಂಪು ವಿಶ್ವವಿದ್ಯಾಲಯದ ವಿಜ್ಞಾನ ನಿಕಾಯದ ಸ್ನಾತಕೋತ್ತರ ಜೀವರಸಾಯನಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಪ್ರಥಮ ರ್‍ಯಾಂಕ್ ಪಡೆದ ವಿದ್ಯಾರ್ಥಿ/ವಿದ್ಯಾರ್ಥಿನಿಗೆ "ಸೋಮಶೇಖರ ಪಿ.ಸಿ. ಬಿನ್ ಪರಶುರಾಮಪ್ಪ ಬಿ.ಹೆಚ್., ನಿವೃತ್ತ ಹಿರಿಯ



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

Scanned with OKEN Scanner

ಸಹಾಯಕ, ಕುವೆಂಪು ವಿಶ್ವವಿದ್ಯಾಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ" ಇವರ ಹೆಸರಿನಲ್ಲಿ ದತ್ತಿನಿಧಿ ನಗದು ಬಹುಮಾನವನ್ನು ನೀಡುವ ಸಂಬಂಧ, ದತ್ತಿ ನಿಧಿ ನಗದು ಬಹುಮಾನವನ್ನು ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸಲು ಸಭೆಯು ಅನುಮೋದನೆ ನೀಡಿತು.

**2026:ಎಸಿ-3.05(ಸಿ):** 2026-27ನೇ ಸಾಲಿನ ಪ್ರವೇಶಾತಿಯಲ್ಲಿ ಸಹ್ಯಾದ್ರಿ ವಿಜ್ಞಾನ ಮತ್ತು ಕಲಾ ಕಾಲೇಜಿನಲ್ಲಿರುವ ಸ್ನಾತಕೋತ್ತರ ವಿಭಾಗಗಳ ಪ್ರವೇಶಾತಿಯನ್ನು ಕೈಬಿಟ್ಟಿರುವ ಹಾಗೂ ಸ್ನಾತಕೋತ್ತರ ಕೇಂದ್ರ ಕಡೂರಿನಲ್ಲಿರುವ ಔಷಧೀಯ ರಸಾಯನಶಾಸ್ತ್ರ ವಿಭಾಗವನ್ನು ಜ್ಞಾನಸಹ್ಯಾದ್ರಿ ಆವರಣದಲ್ಲಿರುವ ಕೆಮಿಕಲ್ಸ್ ಸೈನ್ಸ್ ಕಟ್ಟಡಕ್ಕೆ ಸ್ಥಳಾಂತರಿಸುವ ಬಗ್ಗೆ.

**ಚರ್ಚೆ:** ವಿಷಯ ಮಂಡಿಸಿ ಮಾತನಾಡಿದ ಕುಲಸಚಿವರು, ದಿನಾಂಕ:23-06-2026 ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಎಲ್ಲಾ ನಿಕಾಯಗಳ ಡೀನರು, ಶಾಲಾ ನಿರ್ದೇಶಕರುಗಳು, ಎಲ್ಲಾ ಸ್ನಾತಕೋತ್ತರ ವಿಭಾಗಗಳ ಅಧ್ಯಕ್ಷರುಗಳ ಸಭೆಯಲ್ಲಿ ಚರ್ಚಿಸಿ ನಿರ್ಣಯಿಸಿದಂತೆ ವಿದ್ಯಾರ್ಥಿಗಳ ಕನಿಷ್ಠ ಪ್ರವೇಶಾತಿ ಮತ್ತು ಪ್ರವೇಶಾತಿಯೇ ಇಲ್ಲದ ಕೆಲವು ವಿಭಾಗಗಳನ್ನು ಗುರುತಿಸಿ ಅಂತಹ ವಿಭಾಗಗಳ ಪ್ರವೇಶಾತಿಯನ್ನು 2026-27ನೇ ಸಾಲಿನಿಂದ ಪ್ರವೇಶಾತಿಯನ್ನು ಕೈಬಿಟ್ಟಿರುವುದನ್ನು ವಿವರಿಸಿದರು. ಹಾಗೂ ಪ್ರತಿ ವಿಭಾಗದಲ್ಲಿ ಕಳೆದ 03 ವರ್ಷದಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರುಗಳ ವಿವರವಾದ ಪಟ್ಟಿಯನ್ನು ಸಹ ಸಭೆಗೆ ಮಂಡಿಸಿದರು.

ಸದರಿ ಸಭೆಯಲ್ಲಿ ತೀರ್ಮಾನಿಸಿದಂತೆ ಘಟಕ ಕಾಲೇಜಾದ ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನಲ್ಲಿ ಎಂ.ಕಾಂ ಮತ್ತು ಎಂ.ಬಿ.ಎ ವಿಭಾಗಗಳನ್ನು ಅಲ್ಲಿಯೇ ಮುಂದುವರೆಸುವ ಹಾಗೂ ಸಹ್ಯಾದ್ರಿ ವಿಜ್ಞಾನ ಮತ್ತು ಕಲಾ ಕಾಲೇಜಿನಲ್ಲಿರುವ ಸ್ನಾತಕೋತ್ತರ ವಿಭಾಗಗಳ ಪ್ರವೇಶಾತಿಯನ್ನು ಕೈಬಿಡುವುದು. ಕಡೂರು ಸ್ನಾತಕೋತ್ತರ ಕೇಂದ್ರದಲ್ಲಿರುವ ಎಂ.ಕಾಂ ವಿಭಾಗವನ್ನು ಅಲ್ಲಿಯೇ ಮುಂದುವರೆಸಿ ಔಷಧೀಯ ರಸಾಯನಶಾಸ್ತ್ರ ವಿಭಾಗವನ್ನು ಜ್ಞಾನಸಹ್ಯಾದ್ರಿ ಆವರಣದಲ್ಲಿರುವ ಕೆಮಿಕಲ್ಸ್ ಸೈನ್ಸ್ ಕಟ್ಟಡಕ್ಕೆ ಸ್ಥಳಾಂತರಿಸುವುದು ಹಾಗೂ ಸ್ನಾತಕೋತ್ತರ ಕೇಂದ್ರ ಚಿಕ್ಕಮಗಳೂರಿನಲ್ಲಿರುವ ಸ್ನಾತಕೋತ್ತರ ವಿಭಾಗಗಳ ಪ್ರವೇಶಾತಿಯನ್ನು ಕೈಬಿಡುವುದು.

ಸದಸ್ಯರಾದ ಶ್ರೀ.ಡಿ.ಎಸ್.ಅರುಣ್‌ರವರು ಮಾತನಾಡಿ ವಿದ್ಯಾರ್ಥಿಗಳ ಹಿತದೃಷ್ಟಿಯನ್ನು ಗಮನಿಸಿ ಪ್ರವೇಶಾತಿ ಸ್ಥಗಿತಗೊಳಿಸುವುದು ಸೂಕ್ತವೆಂದರು.

ಮಾನ್ಯ ಕುಲಪತಿಗಳು ಮಾತನಾಡಿ ವಿಭಾಗವನ್ನು ನಡೆಸಲು ಅವಶ್ಯವಾದ ತರಗತಿ ಕೊಠಡಿ ಹಾಗೂ ಇನ್ನಿತರೆ ಕನಿಷ್ಠ ಮೂಲಭೂತ ಸೌಲಭ್ಯಗಳ ಅಗತ್ಯವಿದೆ ಎಂದರು.

ಸ್ನಾತಕೋತ್ತರ ಕೇಂದ್ರ ಕಡೂರಿನ ವಿಭಾಗವನ್ನು ಸ್ಥಳಾಂತರ ಮಾಡಿದಲ್ಲಿ ಕೇಂದ್ರವನ್ನು ಸ್ಥಗಿತಗೊಳಿಸದೇ ಇತರೆ ಶೈಕ್ಷಣಿಕ ಉದ್ದೇಶಗಳಿಗಾಗಿ ಬಳಸಿಕೊಳ್ಳುವುದು ಸೂಕ್ತವೆಂದು ಸದಸ್ಯರುಗಳು ಅಭಿಪ್ರಾಯ ವ್ಯಕ್ತಪಡಿಸಿದರು.

**ನಿರ್ಣಯ:** ಸುಧೀರ್ಘವಾದ ಚರ್ಚೆಯ ನಂತರ ಈ ಕೆಳಕಂಡತೆ ನಿರ್ಣಯಿಸಲಾಯಿತು.

1. ಘಟಕ ಕಾಲೇಜಾದ ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನಲ್ಲಿ ಎಂ.ಕಾಂ ಮತ್ತು ಎಂ.ಬಿ.ಎ ವಿಭಾಗಗಳನ್ನು ಅಲ್ಲಿಯೇ ಮುಂದುವರೆಸುವುದು. ಹಾಗೂ ಸಹ್ಯಾದ್ರಿ ವಿಜ್ಞಾನ ಮತ್ತು ಕಲಾ ಕಾಲೇಜಿನಲ್ಲಿರುವ ಸ್ನಾತಕೋತ್ತರ ವಿಭಾಗಗಳ ಪ್ರವೇಶಾತಿಯನ್ನು ಕೈಬಿಡುವುದು.
2. ಕಡೂರು ಸ್ನಾತಕೋತ್ತರ ಕೇಂದ್ರದಲ್ಲಿರುವ ಎಂ.ಕಾಂ ವಿಭಾಗವನ್ನು ಅಲ್ಲಿಯೇ ಮುಂದುವರೆಸಿ ಔಷಧೀಯ ರಸಾಯನಶಾಸ್ತ್ರ ವಿಭಾಗವನ್ನು ಜ್ಞಾನ ಸಹ್ಯಾದ್ರಿ ಆವರಣದಲ್ಲಿರುವ ಕೆಮಿಕಲ್‌ಸೈನ್ಸ್ ಕಟ್ಟಡಕ್ಕೆ ಸ್ಥಳಾಂತರಿಸುವುದು.



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

Scanned with OKEN Scanner

3. ಸ್ನಾತಕೋತ್ತರ ಕೇಂದ್ರ ಚಿಕ್ಕಮಗಳೂರಿನಲ್ಲಿರುವ ಸ್ನಾತಕೋತ್ತರ ವಿಭಾಗಗಳ ಪ್ರವೇಶಾತಿಯನ್ನು ಕೈಬಿಡುವುದು.
4. ಸ್ನಾತಕೋತ್ತರ ಕೇಂದ್ರ ಕಡೂರಿನ ಕಟ್ಟಡವನ್ನು ಇತರೆ ಶೈಕ್ಷಣಿಕ ಉದ್ದೇಶಗಳಿಗಾಗಿ ಬಳಸಿಕೊಳ್ಳುವುದು.

## ಪ್ರಾಧಿಕಾರಗಳ ವಿಭಾಗ

**2026:ಎಸಿ-3.06(I):** ದಿನಾಂಕ:11-06-2026ರ ಗುರುವಾರ ಅಪರಾಹ್ನ: 03.00 ಗಂಟೆಗೆ ವಿಶ್ವವಿದ್ಯಾಲಯದ ಆಡಳಿತ ಭವನದಲ್ಲಿರುವ ಹೊಸ ಸಿಂಡಿಕೇಟ್ ಸಭಾಂಗಣದಲ್ಲಿ ಜರುಗಿದ ಶಿಕ್ಷಣ ನಿಕಾಯ ಸಭೆಯ ನಡಾವಳಿಗಳ ಅನುಮೋದನೆ ಕುರಿತು.

**ಚರ್ಚೆ:** ವಿಷಯ ಮಂಡಿಸಿ ಮಾತನಾಡಿದ ಕುಲಸಚಿವರು, ಆಯಾಯ ನಿಕಾಯಗಳಿಗೆ ಸಂಬಂಧಿಸಿದ ಪ್ರಸ್ತಾವನೆಗಳನ್ನು ಮಂಡಿಸುವಂತೆ ಸೂಚಿಸಿದರು. ಮೊದಲಿಗೆ ಶಿಕ್ಷಣ ನಿಕಾಯದ ಡೀನರಾದ ಪ್ರೊ.ಗಜಾನನ ಪ್ರಭು ಅವರು ತಮ್ಮ ನಿಕಾಯದಡಿಯಲ್ಲಿ ಬರುವ ಅಧ್ಯಯನ ಮಂಡಳಿಯ ಸಭೆಗಳ ನಡಾವಳಿಗಳನ್ನು ಮಂಡಿಸಿ ನಡಾವಳಿಗಳು ಶಿಕ್ಷಣ ನಿಕಾಯದ ಸಭೆಯ ಅನುಮೋದನೆಯಾಗಿದೆ ಅವುಗಳನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆಗೆ ಮಂಡಿಸಲಾಗಿದೆ ಎಂದರು.

ಸದಸ್ಯರಾದ ಶ್ರೀ.ಗಣೇಶ್ ರವರು ಮಾತನಾಡಿ ಈ ಹಿಂದೆ ಇದ್ದ ಬಿ.ಇಡಿ. Monitoring Committee ಸ್ಥಗಿತಗೊಳಿಸಲಾಗಿದ್ದು, ಅದನ್ನು ಮುಂದುವರೆಸುವುದು ಸೂಕ್ತವೆಂದರು.

ಶಿಕ್ಷಣ ನಿಕಾಯದ ಡೀನರಾದ ಪ್ರೊ.ಗಜಾನನ ಪ್ರಭು ಮಾತನಾಡಿ ಈ ಸಮಿತಿಯು ಹಿಂದೆ ಕಾರ್ಯನಿರ್ವಹಿಸುತ್ತಿತ್ತು ಅದನ್ನು ಅಧ್ಯಯನ ಮಂಡಳಿಯಲ್ಲಿ ಚರ್ಚಿಸಿ ಸ್ಥಗಿತಗೊಳಿಸಲಾಗಿದೆ ಎಂದರು.

ಕುಲಪತಿಗಳು ಮಾತನಾಡುತ್ತಾ, Monitoring Committee ಅಗತ್ಯವಾಗಿದೆ ಎಂದರು. ಕುಲಸಚಿವರು(ಮೌಲ್ಯಮಾಪನ) ರವರು ಮಾತನಾಡಿ ನಿಯಮಾನುಸಾರ Monitoring Committee ಗೆ ಒಂದು ಗೈಡ್ ಲೈನ್ ಮಾಡಿ ಅದಕ್ಕೆ Statutory Power ನೀಡಬೇಕು ಎಂದರು.

ಕುಲಸಚಿವರು ಮಾತನಾಡಿ Monitoring Committee ಸದಸ್ಯರುಗಳ ಆಯ್ಕೆಯನ್ನು ಸೂಕ್ತ ರೀತಿಯಲ್ಲಿ ಮಾಡಿ ಕ್ರಮಕೈಗೊಳ್ಳಲಾಗುವುದು ಎಂದರು.

**ನಿರ್ಣಯ:** ಸುದೀರ್ಘ ಚರ್ಚೆಯ ನಂತರ ಈ ಹಿಂದೆ ಇದ್ದಂತಹ Monitoring Committee ಯನ್ನು ನಿಯಮಾನುಸಾರ ಒಂದು ಗೈಡ್ ಲೈನ್ ಮಾಡಿ ಅದಕ್ಕೆ Statutory Power ನೀಡಿ ಸಮಿತಿಯನ್ನು ಪನರ್‌ರಚಿಸಲು ನಿರ್ಣಯಿಸಿ, ಉಳಿದಂತೆ ದಿನಾಂಕ:11-06-2026 ರಂದು ನಡೆದ ಶಿಕ್ಷಣ ನಿಕಾಯದ ಸಭೆಯ ನಡಾವಳಿಯನ್ನು ಅನುಮೋದಿಸಲಾಯಿತು.

**3.06(II):** ದಿನಾಂಕ:12-06-2026ರ ಶುಕ್ರವಾರ ಪೂರ್ವಾಹ್ನ: 11.00 ಗಂಟೆಗೆ ವಿಶ್ವವಿದ್ಯಾಲಯದ ಆಡಳಿತ ಭವನದಲ್ಲಿರುವ ಹೊಸ ಸಿಂಡಿಕೇಟ್ ಸಭಾಂಗಣದಲ್ಲಿ ಜರುಗಿದ ಕಲಾ ನಿಕಾಯ ಸಭೆಯ ನಡಾವಳಿಗಳ ಅನುಮೋದನೆ ಕುರಿತು.

**ಚರ್ಚೆ:** ಕಲಾ ನಿಕಾಯದ ಡೀನರಾದ ಪ್ರೊ.ಚಂದ್ರಶೇಖರ್ ರವರು ತಮ್ಮ ನಿಕಾಯದಡಿಯಲ್ಲಿ ಬರುವ ಕಲಾ ನಿಕಾಯದ ನಡಾವಳಿಯನ್ನು ಮಂಡಿಸಿ ಮಾತನಾಡುತ್ತಾ, ಸ್ನಾತಕ ಮತ್ತು ಸ್ನಾತಕೋತ್ತರ ಅಧ್ಯಯನ ಮಂಡಳಿಗಳ ಸಭೆಗಳ ನಡಾವಳಿಯನ್ನು ಅನುಮೋದನೆಗಾಗಿ ಮಂಡಿಸಿದರು ಹಾಗೂ ಸ್ನಾತಕ ಪದವಿಗಳಲ್ಲಿ Skill (ಕೌಶಲ್ಯ) ಪತ್ರಿಕೆಯನ್ನು ಪರಿಚಲಿಸಲಾಗಿದೆ ಎಂದರು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.



Scanned with OKEN Scanner

ಸದಸ್ಯರಾದ ಶ್ರೀ.ಡಿ.ಎಸ್.ಅರುಣ್‌ರವರು ಮಾತನಾಡಿ ವಿದ್ಯಾರ್ಥಿಗಳಿಗೆ Skill ಪತ್ರಿಕೆಯನ್ನು ಕಡ್ಡಾಯಗೊಳಿಸುವುದು ಸೂಕ್ತವೆಂದರು

ಸದಸ್ಯರಾದ ಡಾ.ಸಂಧ್ಯಾ ಕಾವೇರಿಯವರು ಮಾತನಾಡಿ ಕೆಲವು NGO ಗಳು ಉಚಿತವಾಗಿ ಈ ರೀತಿಯ ತರಬೇತಿಯನ್ನು ನೀಡಲಾಗುತ್ತಿದ್ದು, ಅದರ ಸದುಪಯೋಗ ಪಡೆದುಕೊಳ್ಳುವುದು ಸೂಕ್ತವೆಂದರು.

ಕುಲಸಚಿವರು ಮಾತನಾಡುತ್ತಾ, Skill Paper ವಿದ್ಯಾರ್ಥಿಗಳಿಗೆ ಯಾವ ರೀತಿ ಉಪಯುಕ್ತ ಮತ್ತು ಹೇಗೆ ಬೋಧನೆ ಮಾಡಲಾಗುವುದು ಎಂದು ಸ್ಪಷ್ಟಪಡಿಸುವಂತೆ ಸೂಚಿಸಿದರು.

ಪ್ರೊ.ಯೋಗೇಂದ್ರರವರು ಮಾತನಾಡಿ Skill ಈ ಹಿಂದೆ ಇದ್ದುದನ್ನು ಕ್ಯಾರಿ ಮಾಡಲಾಗಿದೆ ಎಂದರು.

**ನಿರ್ಣಯ:** 2, 4 ಮತ್ತು 6ನೇ ಸೆಮಿಸ್ಟರ್‌ಗೆ Skill Paper ಸಿದ್ಧಪಡಿಸಿ Course Structure ಮುಂದಿನ ಸೆಮಿಸ್ಟರ್‌ಗೆ ಸಿದ್ಧಪಡಿಸುವಂತೆ ನಿರ್ಣಯಿಸಿ ಉಳಿದಂತೆ ದಿನಾಂಕ:12-06-2026ರಂದು ನಡೆದ ಕಲಾ ನಿಕಾಯದ ನಡಾವಳಿಯನ್ನು ಅನುಮೋದಿಸಲಾಯಿತು.

**3.06(III):** ದಿನಾಂಕ:12-06-2026ರ ಶುಕ್ರವಾರ ಅಪರಾಹ್ನ: 03.00 ಗಂಟೆಗೆ ವಿಶ್ವವಿದ್ಯಾಲಯದ ಆಡಳಿತ ಭವನದಲ್ಲಿರುವ ಹೊಸ ಸಿಂಡಿಕೇಟ್ ಸಭಾಂಗಣದಲ್ಲಿ ಜರುಗಿದ ವಾಣಿಜ್ಯ ನಿಕಾಯ ಸಭೆಯ ನಡಾವಳಿಗಳ ಅನುಮೋದನೆ ಕುರಿತು.

**ಚರ್ಚೆ:** ವಾಣಿಜ್ಯ ನಿಕಾಯದ ಡೀನರಾದ ಪ್ರೊ.ಹೆಚ್.ಎನ್.ರಮೇಶ್‌ರವರು ತಮ್ಮ ನಿಕಾಯದಡಿಯಲ್ಲಿ ಬರುವ ವಾಣಿಜ್ಯ ನಿಕಾಯದ ನಡಾವಳಿಯನ್ನು ಮಂಡಿಸಿ ಮಾತನಾಡುತ್ತಾ, ಸ್ನಾತಕ 4ನೇ ಸೆಮಿಸ್ಟರ್‌ಗೆ Skill Base Syllabus ಪತ್ರಿಕೆಯನ್ನು ಪರಿಚಲಿಸಲಾಗಿದೆ ಎಂದರು.

**ನಿರ್ಣಯ:** ಚರ್ಚೆಯ ನಂತರ 1, 3 ಮತ್ತು 5ನೇ ಸೆಮಿಸ್ಟರ್‌ಗೆ ಅಳವಡಿಸಿ ನಂತರ 2,4 ಮತ್ತು 6 ನೇ ಸೆಮಿಸ್ಟರ್ ಗಳಿಗೆ ಪಠ್ಯಕ್ರಮಗಳನ್ನು ಪರಿಷ್ಕರಿಸಿದ ನಂತರ ಜಾರಿಗೊಳಿಸಲು ನಿರ್ಣಯಿಸಲಾಯಿತು. ಉಳಿದಂತೆ ದಿನಾಂಕ:12-06-2026 ರಂದು ನಡೆದ ವಾಣಿಜ್ಯ ನಿಕಾಯದ ಸಭೆಯ ನಡಾವಳಿಯನ್ನು ಅನುಮೋದಿಸಲಾಯಿತು.

**3.06(IV):** ದಿನಾಂಕ:17-06-2026ರ ಗುರುವಾರ ಪೂರ್ವಾಹ್ನ: 11.00 ಗಂಟೆಗೆ ವಿಶ್ವವಿದ್ಯಾಲಯದ ಆಡಳಿತ ಭವನದಲ್ಲಿರುವ ಹೊಸ ಸಿಂಡಿಕೇಟ್ ಸಭಾಂಗಣದಲ್ಲಿ ಜರುಗಿದ ವಿಜ್ಞಾನ ನಿಕಾಯ ಸಭೆಯ ನಡಾವಳಿಗಳ ಅನುಮೋದನೆ ಕುರಿತು.

**ಚರ್ಚೆ:** ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ಡೀನರಾದ ಪ್ರೊ.ರಾಜನಾಯಕರವರು ತಮ್ಮ ನಿಕಾಯದಡಿಯಲ್ಲಿ ಬರುವ ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ನಡಾವಳಿಯನ್ನು ಮಂಡಿಸಿ ಮಾತನಾಡುತ್ತಾ, ಸ್ನಾತಕ ಗೃಹ ವಿಜ್ಞಾನ ಪಠ್ಯಕ್ರಮವು ಕಲಾ ನಿಕಾಯದಡಿಯಲ್ಲಿ ಬರುವುದರಿಂದ ಅದನ್ನು ಈ ವರ್ಷ ಅನುಮೋದಿಸಿ ಮುಂದಿನ ವರ್ಷದಿಂದ ಕಲಾ ನಿಕಾಯದ ವ್ಯಾಪ್ತಿಗೆ ಅನುಮೋದನೆಗೆ ಮಂಡಿಸುವಂತೆ ಸಭೆಯಲ್ಲಿ ಚರ್ಚೆಯಾಗಿದೆ ಎಂದರು.

ಕುಲಪತಿಗಳು ಮಾತನಾಡಿ ಪಠ್ಯಕ್ರಮದ Contenet ನೋಡಬೇಕೇ ಹೊರತು ನಿಕಾಯವನ್ನು ನೋಡಬಾರದು ಎಂದರು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.



Scanned with OKEN Scanner

ಸದಸ್ಯರಾದ ಪ್ರೊ.ಯೋಗೇಂದ್ರರವರು ಮಾತನಾಡಿ ಗೃಹವಿಜ್ಞಾನ ಕೋರ್ಸು ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಕೇವಲ ಒಂದು ಕಾಲೇಜಿನಲ್ಲಿ ಮಾತ್ರ ಇದ್ದು ವಿದ್ಯಾರ್ಥಿಗಳ ಸಂಖ್ಯೆಯೂ ಸಹ ಕಡಿಮೆ ಇದ್ದು ಅದನ್ನು ಮುಕ್ತಾಯಗೊಳಿಸುವುದು ಸೂಕ್ತವೆಂದರು.

ನಿರ್ಣಯ: ಚರ್ಚೆಯ ನಂತರ ಸ್ನಾತಕ ಗೃಹವಿಜ್ಞಾನ (Home Science) ವಿಷಯದ ಪಠ್ಯಕ್ರಮಕ್ಕೆ ಸಂಬಂಧಿಸಿದಂತೆ ಪ್ರಸ್ತುತ ಇರುವ ವಿದ್ಯಾರ್ಥಿಗಳಿಗೆ ಮಾತ್ರ ಅನ್ವಯವಾಗುವಂತೆ ಪಠ್ಯಗಳನ್ನು ಅನುಮೋದಿಸಿ ಉಳಿದಂತೆ ದಿನಾಂಕ:17-06-2026 ರಂದು ನಡೆದ ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ಸಭೆಯ ನಡಾವಳಿಯನ್ನು ಅನುಮೋದಿಸಲಾಯಿತು.

2026:ಎಸಿ-3.07: ದಿನಾಂಕ:05-05-2026ರ ಮಂಗಳವಾರ ಶತಮಾನೋತ್ಸವ ಭವನದ ಹೊಸ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ 178ನೇ ವಿದ್ಯಾವಿಷಯಕ ಪರಿಷತ್ ಅಸಾಮಾನ್ಯ (ಘಟಿಕೋತ್ಸವ) ಸಭೆಯ ನಡಾವಳಿಗಳ ಅನುಮೋದನೆ.

ನಿರ್ಣಯ: ದಿನಾಂಕ:05-05-2026ರ ಮಂಗಳವಾರ ಶತಮಾನೋತ್ಸವ ಭವನದ ಹೊಸ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ 178ನೇ ವಿದ್ಯಾವಿಷಯಕ ಪರಿಷತ್ ಅಸಾಮಾನ್ಯ (ಘಟಿಕೋತ್ಸವ) ಸಭೆಯ ನಡಾವಳಿಗಳನ್ನು ಸಭೆಯು ಪರಿಶೀಲಿಸಿ ಅನುಮೋದಿಸಿತು.

2026:ಎಸಿ-3.08: ದಿನಾಂಕ:05-05-2026ರ ಮಂಗಳವಾರ ಶತಮಾನೋತ್ಸವ ಭವನದ ಹೊಸ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ 178ನೇ ವಿದ್ಯಾವಿಷಯಕ ಪರಿಷತ್ ಅಸಾಮಾನ್ಯ (ಘಟಿಕೋತ್ಸವ) ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿ ಅನುಮೋದನೆಗಾಗಿ.

ನಿರ್ಣಯ: ದಿನಾಂಕ:05-05-2026ರ ಮಂಗಳವಾರ ಶತಮಾನೋತ್ಸವ ಭವನದ ಹೊಸ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ 178ನೇ ವಿದ್ಯಾವಿಷಯಕ ಪರಿಷತ್ ಅಸಾಮಾನ್ಯ (ಘಟಿಕೋತ್ಸವ) ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿಯನ್ನು ಸಭೆಯು ಅನುಮೋದಿಸಿತು.

## ಹಣಕಾಸು ವಿಭಾಗ

2026:ಎಸಿ-3.09: 2022-23 ಮತ್ತು 2023-24ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿಗಳ ಅನುಪಾಲನಾ ವರದಿಯ ಅನುಮೋದನೆ ಕುರಿತು.

ಚರ್ಚೆ: ವಿಷಯ ಮಂಡಿಸಿ ಮಾತನಾಡಿದ ಹಣಕಾಸು ಅಧಿಕಾರಿಗಳು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ ಪ್ರಕಾರ ಪ್ರತಿ ವರ್ಷ ಲೆಕ್ಕ ಪರಿಶೋಧನೆ ಮಾಡಿ ವರದಿಯನ್ನು ಸಲ್ಲಿಸುತ್ತದೆ. ಅದರಂತೆ 2022-23 ಹಾಗೂ 2023-24ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನೆಯಲ್ಲಿ ಕಂಡು ಬಂದ ಆಕ್ಷೇಪಣೆಗಳ ಹಾಗೂ ವಸೂಲಾತಿ ಪ್ರಕರಣಗಳ ತ:ಖ್ತೆಯನ್ನು ಹಾಗೂ ಅದಕ್ಕೆ ವಿಶ್ವವಿದ್ಯಾಲಯವು ನೀಡಿರುವ ಅನುಪಾಲನಾ ವರದಿಗಳನ್ನು ನಿಯಮಾನುಸಾರ ಪ್ರಾಧಿಕಾರಗಳ ಅನುಮೋದನೆಯಾಗಬೇಕಿರುವುದರಿಂದ ವಿದ್ಯಾವಿಷಯಕ ಪರಿಷತ್ ಸಭೆಗೆ ಅನುಮೋದನೆಗಾಗಿ ಮಂಡಿಸಿದೆ ಎಂದರು. ಕುಲಸಚಿವರು ಮಾತನಾಡಿ ಪ್ರಸ್ತುತ ವಿಶ್ವವಿದ್ಯಾಲಯದ ಆರ್ಥಿಕ ಸ್ಥಿತಿಗತಿಗಳನ್ನು ಸಂಕ್ಷಿಪ್ತವಾಗಿ ವಿವರಿಸುವಂತೆ ಸೂಚಿಸಿದರು. ಇದಕ್ಕೆ ಉತ್ತರಿಸಿದ ಹಣಕಾಸು ಅಧಿಕಾರಿಗಳು 2026-27ನೇ ಸಾಲಿನ ಆಯ-ವ್ಯಯದಲ್ಲಿ 47ಕೋಟಿ ಕೊರತೆ ಬಜೆಟ್ ಮಂಡಿಸಲಾಗಿದೆ. ಇದರಲ್ಲಿ ಪ್ರವೇಶಾತಿ, ಪರೀಕ್ಷೆ ಮತ್ತು ಸಂಯೋಜನೆಯಿಂದ ಸುಮಾರು 34 ಕೋಟಿ ಆದಾಯ ನಿರೀಕ್ಷಿಸಲಾಗಿದೆ. ನಿವೃತ್ತಿಯಾಗುವವರ ಸಂಖ್ಯೆ ಹೆಚ್ಚಾಗುತ್ತಿದ್ದು ಇನ್ನೂ 45 ಕೋಟಿಯಷ್ಟು ನಿವೃತ್ತಿ ಸೌಲಭ್ಯಗಳನ್ನು ಪಾವತಿಸಬೇಕಾಗಿದ್ದು ಇವುಗಳನ್ನು ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲದಿಂದ ಭರಿಸಬೇಕಾಗಿದೆ ಎಂದರು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.



Scanned with OKEN Scanner

2027–28ನೇ ಸಾಲಿನ ಆಯವ್ಯಯವನ್ನು ಅನುಮೋದಿಸುವಾಗ ಸರ್ಕಾರದಿಂದ ಕೆಲವು ಷರತ್ತುಗಳನ್ನು ವಿಧಿಸಲಾಗಿದೆ ಎಂದರು. ನಂತರ 2022–23 ಮತ್ತು 2023–24ನೇ ಆರ್ಥಿಕ ವರ್ಷದ ಲೆಕ್ಕಪರಿಶೋಧನಾ ವರದಿಗೆ ಅನುಪಾಲನಾ ವರದಿಯನ್ನು ಮಂಡಿಸುತ್ತಾ ಅದರಲ್ಲಿನ ಪ್ರತಿಯೊಂದು ಅಂಶಗಳ ಬಗ್ಗೆ ಸಭೆಗೆ ವಿವರಿಸಿದರು.

ಎ.ಸಿ ಹುಂಡಿಯಲ್ಲಿ ಮುಂಗಡ ಪಡೆದು ಎನ್.ಡಿ.ಸಿ ಹುಂಡಿಯನ್ನು ವಿಳಂಬವಾಗಿ ಸಲ್ಲಿಸುವುದರ ಆಕ್ಷೇಪಣೆಗೆ ಸಂಬಂಧಿಸಿದಂತೆ ಸದ್ಯರಾದ ಡಾ.ಎನ್.ಡಿ.ವಿರೂಪಾಕ್ಷ ಇವರು ಮಾತನಾಡುತ್ತಾ, ತಮ್ಮ ಕ್ರೀಡಾ ವಿಭಾಗದಿಂದ ವಿವಿಧ ಕ್ರೀಡಾ ಚಟುವಟಿಕೆಗಳಿಗೆ ಪಡೆದಿರುವ ಮುಂಗಡಗಳಿಗೆ ನಿಗದಿತ ಸಮಯದಲ್ಲಿ ಎನ್.ಡಿ.ಸಿ ಹುಂಡಿಯನ್ನು ಸಲ್ಲಿಸಲು ಸಾಧ್ಯವಾಗದೇ ಇರುವುದರ ಕುರಿತು ವಿವರಿಸಿದರು.

ಸದಸ್ಯರಾದ ಶ್ರೀ.ಡಿ.ಎಸ್.ಅರುಣ್ ಇವರು ಮಾತನಾಡುತ್ತಾ, ಇಂತಹ ಸಂದರ್ಭದಲ್ಲಿ ಕ್ರೀಡಾ ವಿಭಾಗಕ್ಕೆಂದೇ ಪ್ರತ್ಯೇಕವಾದ ನೀತಿ ರೂಪಿಸುವುದು ಸೂಕ್ತವೆಂದರು. ಹಾಗೂ ಎನ್.ಡಿ.ಸಿ ಹುಂಡಿಯನ್ನು ಸಲ್ಲಿಸಲು ಎಷ್ಟು ಕಾಲಾವಕಾಶ ನೀಡಲಾಗುತ್ತಿದೆ ಎಂದರು. ಇದಕ್ಕೆ ಉತ್ತರಿಸಿದ ಹಣಕಾಸು ಅಧಿಕಾರಿಗಳು ನಿಯಮಾನುಸಾರ ಎ.ಸಿ ಹುಂಡಿಯಲ್ಲಿ ಮುಂಗಡ ಪಡೆದ 30 ದಿನಗಳೊಳಗಾಗಿ ಎನ್.ಡಿ.ಸಿ ಹುಂಡಿಯನ್ನು ಸಲ್ಲಿಸಬೇಕಾಗಿದೆ. ಆದರೆ ಲೆಕ್ಕ ಪರಿಶೋಧಕರಿಗೆ ಅನಿವಾರ್ಯತೆಯನ್ನು ತಿಳಿಸಿ ಗರಿಷ್ಟ 60 ದಿನಗಳವರೆಗೆ ಅವಕಾಶವನ್ನು ಕೋರಬಹುದಾಗಿದೆ ಎಂದರು.

**ನಿರ್ಣಯ:** ಚರ್ಚೆಯ ನಂತರ 2022–23 ಮತ್ತು 2023–24 ನೇ ಸಾಲಿನ ವಾರ್ಷಿಕ ಲೆಕ್ಕ ಪರಿಶೋಧನಾ ವರದಿಗಳಿಗೆ ಅನುಪಾಲನಾ ವರದಿಯನ್ನು ಅನುಮೋದಿಸಿದ ಸಭೆಯು ನಿಯಮಾನುಸಾರ ಪರಿಶೀಲಿಸಿ ಅಗತ್ಯ ಕ್ರಮಕೈಗೊಳ್ಳಲು ಹಣಕಾಸು ಅಧಿಕಾರಿಗಳಿಗೆ ನಿರ್ದೇಶಿಸಲಾಯಿತು.

## ಕಾಲೇಜು ಅಭಿವೃದ್ಧಿ ಪರಿಷತ್ ವಿಭಾಗ

**2026:ಎಸಿ–3.10:** 2026–27ನೇ ಶೈಕ್ಷಣಿಕ ಸಾಲಿಗೆ B.Com (AEDP) ಸ್ನಾತಕ ಪದವಿಗೆ ನವೀನ ಸಂಯೋಜನೆಗೆ ಅನುಮತಿ ನೀಡುವ ಸಂಬಂಧ ದಿನಾಂಕ: 03–07–2026 ರಂದು ನಡೆಯುವ ವಿದ್ಯಾವಿಷಯಕ ಪರಿಷತ್ ಸಭೆಗೆ ವಿಷಯ ಮಂಡಿಸುವ ಬಗ್ಗೆ.

**ನಿರ್ಣಯ:** 2026–27ನೇ ಶೈಕ್ಷಣಿಕ ಸಾಲಿಗೆ B.Com (AEDP) ಸ್ನಾತಕ ಪದವಿಗೆ ನವೀನ ಸಂಯೋಜನೆ ಪಡೆಯುವ ಸಂಬಂಧ ನಿಯಮಾನುಸಾರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಅನುಮೋದಿಸಲಾಯಿತು

**2026:ಎಸಿ–3.11:** 2026–27ನೇ ಶೈಕ್ಷಣಿಕ ಸಾಲಿಗೆ ಹೆಚ್ಚುವರಿ ಪ್ರವೇಶಾತಿ ಕೋರಿರುವ ಬಗ್ಗೆ.

**ನಿರ್ಣಯ:** 2026–27ನೇ ಶೈಕ್ಷಣಿಕ ಸಾಲಿಗೆ ಹೆಚ್ಚುವರಿ ಪ್ರವೇಶಾತಿ ಕೋರಿ ಬಂದಿರುವ 04 ಕಾಲೇಜುಗಳ ಪ್ರಸ್ತಾವನೆಯನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ ಸರ್ಕಾರಕ್ಕೆ ಸಲ್ಲಿಸಲಾದ ಕ್ರಮವನ್ನು ಅನುಮೋದಿಸಲಾಯಿತು.

| ಕ್ರಂ ಸಂ | ಕಾಲೇಜಿನ ಹೆಸರು | ಸಂಯೋಜನೆ ವಿವರ | ಪದವಿ | ಹಾಲಿ ವಿದ್ಯಾರ್ಥಿಗಳ ಪ್ರಮಾಣ | ಹೆಚ್ಚುವರಿ ಪ್ರವೇಶಾತಿ | ಒಟ್ಟು ವಿದ್ಯಾರ್ಥಿಗಳ ಪ್ರಮಾಣ |
|---|---|---|---|---|---|---|
| 1 | ಡಿ.ವಿ.ಎಸ್. ಕಲಾ ಮತ್ತು ವಿಜ್ಞಾನ ಕಾಲೇಜು, ಶಿವಮೊಗ್ಗ | ಮುಂದುವರಿಕೆ ಸಂಯೋಜನೆ | ಬಿ.ಕಾಂ | 120 | **36 (30%)** | 156 |

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

| | | | | | | |
|---|---|---|---|---|---|---|
| 2 | ಪಿ.ಇ.ಎಸ್. ಇನ್ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಮ್ಯಾನೇಜ್‌ಮೆಂಟ್ ಸ್ಟಡೀಸ್, ಶಿವಮೊಗ್ಗ. | ಶಾಶ್ವತ ಸಂಯೋಜನೆ ನವೀಕರಣ | ಬಿ.ಕಾಂ | 120 | 60<br>01 ವಿಭಾಗ | 180 |
| 3 | ಕಟೀಲ್ ಅಶೋಕ್ ಪೈ ಸ್ಮಾರಕ ಕಾಲೇಜು, ಶಿವಮೊಗ್ಗ | ಮುಂದುವರಿಕೆ ಸಂಯೋಜನೆ | ಬಿ.ಸಿ.ಎ<br>ಬಿ.ಕಾಂ | 60<br>50 | 12 (20%)<br>10 (20%) | 72<br>60 |
| 4 | ತುಂಗಾ ಮಹಾವಿದ್ಯಾಲಯ, ತೀರ್ಥಹಳ್ಳಿ | ಮುಂದುವರಿಕೆ ಸಂಯೋಜನೆ | ಬಿ.ಕಾಂ | 60 | 60<br>01 ವಿಭಾಗ | 120 |

**2026:ಎಸಿ-3.12:** 2026-27ನೇ ಶೈಕ್ಷಣಿಕ ಸಾಲಿಗೆ ಹೆಚ್ಚುವರಿ ಪ್ರವೇಶಾತಿ ಕೋರಿರುವ ಬಗ್ಗೆ.

**ನಿರ್ಣಯ:** 2026-27ನೇ ಶೈಕ್ಷಣಿಕ ಸಾಲಿಗೆ ಹೆಚ್ಚುವರಿ ಪ್ರವೇಶಾತಿ ಕೋರಿ ಬಂದಿರುವ 02 ಕಾಲೇಜುಗಳ ಪ್ರಸ್ತಾವನೆಯನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ ಸರ್ಕಾರಕ್ಕೆ ಸಲ್ಲಿಸಲಾದ ಕ್ರಮವನ್ನು ಅನುಮೋದಿಸಲಾಯಿತು.

| ಕ್ರಂ ಸಂ | ಕಾಲೇಜಿನ ಹೆಸರು | ಸಂಯೋಜನೆ ವಿವರ | ಪದವಿ | ಹಾಲಿ ವಿದ್ಯಾರ್ಥಿಗಳ ಪ್ರಮಾಣ | ಹೆಚುವರಿ ಪ್ರವೇಶಾತಿ | ಒಟ್ಟು ವಿದ್ಯಾರ್ಥಿಗಳ ಪ್ರಮಾಣ |
|---|---|---|---|---|---|---|
| 1 | ಸಹ್ಯಾದ್ರಿ ಇನ್ಸ್‌ಟಿಟ್ಯೂಟ್ ಆಫ್ ಕಾಮರ್ಸ್ ಕಾಲೇಜು, ಚಿಕ್ಕಮಗಳುರು. | ಮುಂದುವರಿಕೆ ಸಂಯೋಜನೆ | ಬಿ.ಕಾಂ | 60 | 06 (10%) | 66 |
| 2 | ಶ್ರೀ ಜೆ.ಸಿ.ಬಿ.ಎಂ ಕಾಲೇಜು, ಶೃಗೇರಿ. | ಶಾಶ್ವತ ಸಂಯೋಜನೆ ನವೀಕರಣ | ಬಿ.ಕಾಂ | 120 | 24 (20%) | 144 |
| | | ಮುಂದುವರಿಕೆ ಸಂಯೋಜನೆ | ಬಿ.ಸಿ.ಎ | 60 | 12 (20%) | 72 |

## ಪರೀಕ್ಷಾ ವಿಭಾಗ

**2026:ಎಸಿ-3.13** ಸ್ನಾತಕೋತ್ತರ ಕೋರ್ಸ್‌ಗಳಿಗೆ ಏಕ ಮೌಲ್ಯಮಾಪನ ಪದ್ಧತಿಯನ್ನು ಅಳವಡಿಸಿಕೊಳ್ಳುವ ಕುರಿತು.

**ಚರ್ಚೆ:** ಕುಲಸಚಿವರು (ಮೌಲ್ಯಮಾಪನ) ರವರು ವಿಷಯವನು ಮಂಡಿಸಿ ಮಾತನಾಡುತ್ತಾ, ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೋರ್ಸುಗಳಿಗೆ ಏಕ ಮೌಲ್ಯಮಾಪನ ಪದ್ಧತಿಯನ್ನು ಅಳವಡಿಸಿಕೊಳ್ಳುವ ಸಂಬಂಧ ನಿಯಮಾವಳಿಯನ್ನು ರಚಿಸಿಕೊಂಡು ಅನುಷ್ಠಾನಗೊಳಿಸುವ ಕುರಿತು ಚರ್ಚೆ ಮತ್ತು ಅನುಮೋದನೆಗಾಗಿ ಮಂಡಿಸಲಾಗಿದೆ ಎಂದರು.

ಕೆಲವು ಸದಸ್ಯರುಗಳು ಇದಕ್ಕೆ ರೆಗ್ಯುಲೇಷನ್ ಮಾಡಿ ನಂತರ ಅನುಷ್ಠಾನಗೊಳಿಸುವುದು ಸೂಕ್ತವೆಂದರು

ಸದಸ್ಯರಾದ ಪ್ರೊ.ಜಿ.ಜೆ.ಸತೀಶ್ ಇವರು ಮಾತನಾಡುತ್ತಾ, ಕಳೆದ ಜನವರಿ ಮಾಹೆಯಲ್ಲಿ ನಡೆದ ಪರೀಕ್ಷಾ ಫಲಿತಾಂಶವನ್ನು ಇನ್ನೂ ನೀಡಿರುವುದಿಲ್ಲ ವಿದ್ಯಾರ್ಥಿಗಳು ಮತ್ತು ಪೋಷಕರು ಫಲಿತಾಂಶವು ವಿಳಂಬವಾಗಿರುವುದರ ಕುರಿತು ವಿಭಾಗಗಳಿಗೆ ಸಂಪರ್ಕಿಸುತ್ತಿದ್ದು, ಆದಷ್ಟು ಬೇಗ ಫಲಿತಾಂಶವನ್ನು ಪ್ರಕಟಿಸುವಂತೆ ಕೋರಿದರು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.



Scanned with OKEN Scanner

ಕುಲಪತಿಗಳು ಮಾತನಾಡಿ ಡಿಜಿಟಲ್ ಮೌಲ್ಯಮಾಪನ ಪದ್ಧತಿ ಇದ್ದಾಗ್ಯೂ ಫಲಿತಾಂಶ ಇಷ್ಟೊಂದು ವಿಳಂಬವಾಗಲು ಏನು ಕಾರಣ ಮತ್ತು ಇದಕ್ಕೆ ಯಾರು ಹೊಣೆ ಎಂದರು.

ಕುಲಸಚಿವರು ಮಾತನಾಡಿ ಆದಷ್ಟು ಶೀಘ್ರದಲ್ಲೇ ಫಲಿತಾಂಶವನ್ನು ಪ್ರಕಟಿಸಬೇಕು ಎಂದರು.

ನಿರ್ಣಯ: ಚರ್ಚೆಯ ನಂತರ ಸ್ನಾತಕೋತ್ತರ ಕೋರ್ಸುಗಳಿಗೆ ಏಕ ಮೌಲ್ಯಮಾಪನ ಪದ್ಧತಿಯನ್ನು ಅಳವಡಿಸುವ ಸಂಬಂಧ ರೆಗ್ಯುಲೇಷನ್ ರಚಿಸಿಕೊಂಡು ಅದರಂತೆ ಮುಂದಿನ ಕ್ರಮಕೈಗೊಳ್ಳಲು ನಿರ್ಣಯಿಸಲಾಯಿತು

2026 AC 3.14 **ಅಧ್ಯಕ್ಷರ ಅಪ್ಪಣೆಯ ಮೇರೆಗೆ**

1) ಸದಸ್ಯರಾದ ಶ್ರೀ.ಡಿ.ಎಸ್.ಅರುಣ್‌ರವರು ಮಾತನಾಡುತ್ತಾ, Digital Valuation ಬಗ್ಗೆ ಚರ್ಚೆಗೆ ಆಗ್ರಹಿಸಿದರು. U.U.C.M.S ತಂತ್ರಾಂಶವು ಜಾರಿಯಲ್ಲಿರುವುದರಿಂದ ಡಿಜಿಟಲ್ ಮೌಲ್ಯಮಾಪನ ತಂತ್ರಾಂಶದ ಅಗತ್ಯವಿದೆಯೇ ಎಂದರು. ಇದರ ದರವೂ ಜಾಸ್ತಿಯಿದ್ದು ನಿಗದಿತ ಸಮಯದಲ್ಲಿಯೂ ಕೆಲಸ ಆಗುತ್ತಿಲ್ಲವೆಂದರು.

ಕುಲಸಚಿವರು ಮಾತನಾಡಿ ಒಂದು ದಾಖಲೆಯನ್ನು ಸ್ಕ್ಯಾನ್ ಮಾಡಲು ನಿಗದಿಯಾಗಿರುವ ದರವು ದುಬಾರಿಯಾಗಿದೆ ಎಂದರು. ಕೆಲವು ಸದಸ್ಯರುಗಳು ನಿಗದಿತ ಸಮಯದಲ್ಲಿ ಮೌಲ್ಯಮಾಪನ ಮತ್ತು ಫಲಿತಾಂಶವಾಗದೇ ವಿಳಂಬವಾಗುತ್ತಿದೆ ಎಂದರು.

ನಿರ್ಣಯ: **ಚರ್ಚೆಯ ನಂತರ Digital Valuation ಕುರಿತು ಮತ್ತೊಮ್ಮೆ ಪರಿಶೀಲಿಸಿ ಅಗತ್ಯ ಕ್ರಮಕೈಗೊಳ್ಳಲು ನಿರ್ಣಯಿಸಲಾಯಿತು.**

2) ವಿಶ್ವವಿದ್ಯಾಲಯದ ಭೂ ಪ್ರದೇಶದ ಗುತ್ತಿಗೆ ಅವಧಿ ನವೀಕರಣ ಸಂಬಂಧ CA ಮತ್ತು NPV ಮೊಬಲಗನ್ನು ಪಾವತಿಸುವಂತೆ ಅರಣ್ಯ ಇಲಾಖೆಯಿಂದ ಬಂದಿರುವ ಡಿಮಾಂಡ್ ನೋಟ್ ಬಗ್ಗೆ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿರುವುದಕ್ಕೆ ಕುಲಸಚಿವರು ಸಭೆಗೆ ವಿವರಿಸಿ ಕರ್ನಾಟಕ ಸರ್ಕಾರದ ಕಂದಾಯ ಇಲಾಖೆಯು ಮೈಸೂರು ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರವನ್ನು ಸ್ಥಾಪಿಸುವ ಉದ್ದೇಶಕ್ಕಾಗಿ ಭದ್ರಾವತಿ ತಾಲ್ಲೂಕಿನ ಸಿಂಗನಮನೆ ಕಿರುಮೀಸಲು ಅರಣ್ಯ ಪ್ರದೇಶದ 230 ಎಕರೆ ಅರಣ್ಯ ಭೂಮಿಯನ್ನು ಬಾಡಿಗೆ ಆಧಾರದಲ್ಲಿ 20 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ 1979ನೇ ಇಸವಿಯಲ್ಲಿ ಮಂಜೂರು ಮಾಡಲಾಗಿತ್ತು. ನಂತರ ಸರ್ಕಾರವು ಮೈಸೂರು ವಿಶ್ವವಿದ್ಯಾಲಯವನ್ನು ವಿಭಜಿಸಿ ಬಿ.ಆರ್. ಪ್ರಾಜೆಕ್ಟ್‌ನಲ್ಲಿನ ಮೈಸೂರು ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರದಲ್ಲಿ 1987ರಂದು ಕುವೆಂಪು ವಿಶ್ವವಿದ್ಯಾಲಯವನ್ನು ಸ್ಥಾಪಿಸಿತು. ಸದರಿ ಸಿಂಗನಮನೆ ಕಿರು ಮೀಸಲು ಅರಣ್ಯ ಭೂಮಿಯಲ್ಲಿ ಶೈಕ್ಷಣಿಕ, ಸಂಶೋಧನೆ, ಆಡಳಿತ ಮತ್ತು ವಸತಿ ನಿಲಯ, ಮುಂತಾದ ಅಗತ್ಯ ಕಟ್ಟಡಗಳನ್ನು ನಿರ್ಮಿಸಲಾಗಿದೆ.

1987ರಂದು ಕುವೆಂಪು ವಿಶ್ವವಿದ್ಯಾಲಯವು ಸ್ಥಾಪನೆಯಾದ ನಂತರ ಕರ್ನಾಟಕ ಅರಣ್ಯ (ಸಂರಕ್ಷಣಾ) ಕಾಯ್ದೆ 1980, ದಿನಾಂಕ:25.10.1990ರಲ್ಲಿ ಜಾರಿಗೆ ಬಂದಿದ್ದು, ಸಿಂಗನಮನೆ ಕಿರು ಮೀಸಲು ಅರಣ್ಯವನ್ನು ಭಾರತ ಸರ್ಕಾರವು 'ಭದ್ರಾ ವನ್ಯಜೀವಿ ಅಭಯಾರಣ್ಯ'ವೆಂದು ಘೋಷಿಸಿದ್ದು, ತದನಂತರದಲ್ಲಿ 'ಭದ್ರಾ ಹುಲಿ ಸಂರಕ್ಷಣಾ ಅರಣ್ಯ'ವೆಂದು ಘೋಷಿಸಲಾಗಿದೆ. ಈ ಹಿನ್ನೆಲೆಯಲ್ಲಿ, ಸಿಂಗನಮನೆ ಕಿರು ಮೀಸಲು ಅರಣ್ಯ ಪ್ರದೇಶದಲ್ಲಿದ್ದ ಕುವೆಂಪು ವಿಶ್ವವಿದ್ಯಾಲಯವು ಪ್ರಸ್ತುತ ಭದ್ರಾ ಹುಲಿ ಸಂರಕ್ಷಣಾ ಅರಣ್ಯ ಪ್ರದೇಶದ ವ್ಯಾಪ್ತಿಗೆ ಸೇರ್ಪಡೆಗೊಂಡಿದೆ.

ವಿಶ್ವವಿದ್ಯಾಲಯದ ಭೂಪ್ರದೇಶದ 20 ವರ್ಷಗಳ ಗುತ್ತಿಗೆಯ ಒಪ್ಪಂದದ ಅವಧಿಯು 1999ಕ್ಕೆ ಮುಕ್ತಾಯಗೊಂಡಿದ್ದ ಹಿನ್ನೆಲೆಯಲ್ಲಿ, ಗುತ್ತಿಗೆ ಒಪ್ಪಂದವನ್ನು 99 ವರ್ಷಗಳಿಗೆ ನವೀಕರಿಸುವಂತೆ

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿತ್ತು. ಭಾರತೀಯ ವನ್ಯ ಜೀವಿ ಮಂಡಳಿಯ ಸ್ಥಾಯಿ ಸಮಿತಿಯು (ಐಬಿಡಬ್ಲೂಎಲ್) ಸಭೆಯಲ್ಲಿ ಕೆಲವು ಷರತ್ತುಗಳನ್ನು ವಿಧಿಸಿದ್ದು, ಅದರಲ್ಲಿ

(1) ಕುವೆಂಪು ವಿಶ್ವವಿದ್ಯಾಲಯವು ಸ್ನಾತಕೋತ್ತರ ವನ್ಯಜೀವಿ ಮತು ನಿರ್ವಹಣೆ ಅಧ್ಯಯನ ಮತ್ತು ಸಂಶೋಧನಾ ವಿಭಾಗವನ್ನು ಪ್ರಾರಂಬಿಸಬೇಕು

(2)ವಿಶ್ವವಿದ್ಯಾಲಯದ ಆವರಣದಲ್ಲಿರುವ ಉದ್ಯಾನವನ ಮತ್ತು ಗಿಡಮರಗಳಿಗೆ ಸಾವಯವ/ಎರೆಹುಳು ಗೊಬ್ಬರಗಳನ್ನು ಬಳಸಬೇಕು ಹಾಗೂ

(3) ಅರಣ್ಯ ಇಲಾಖೆಗೆ ಪರ್ಯಾಯವಾಗಿ ಕಂದಾಯ ಜಮೀನನ್ನು ವರ್ಗಾಯಿಸಬೇಕು. ವಿಶ್ವವಿದ್ಯಾಲಯವು ಭಾರತೀಯ ವನ್ಯ ಜೀವಿ ಮಂಡಳಿಯ ಸ್ಥಾಯಿ ಸಮಿತಿ ವಿಧಿಸಿದ್ದ ಎಲ್ಲಾ ಷರತ್ತುಗಳನ್ನು ಪೂರ್ಣಗೊಳಿಸಲಾಗಿರುತ್ತದೆ.

ಅರಣ್ಯ ಸಂರಕ್ಷಣೆ ಕಾಯ್ದೆ 1980ರ ಕಾಲಂ-2ರ ಅಡಿಯಲ್ಲಿ ಅರಣ್ಯ ಪ್ರದೇಶದ ಬಿಡುಗಡೆಗಾಗಿ ಆನ್‌ಲೈನ್ ಪ್ರಸ್ತಾವನೆಯನ್ನು ದಾಖಲಾತಿಗಳು ಹಾಗೂ ಕೇಂದ್ರ ಸರ್ಕಾರದ ಮಾರ್ಗಸೂಚಿಗಳು ಹಾಗೂ ಮಾನ್ಯ ನ್ಯಾಯಾಲಯದ ಆದೇಶದನ್ವಯ ಎನ್.ಪಿ.ವಿ ಮತ್ತು ಸಿ.ಎ ಮೊತ್ತ ಪಾವತಿಗೆ ಮುಚ್ಚಳಿಕೆಗಳೊಂದಿಗೆ ಕೇಂದ್ರ ಸರ್ಕಾರದ ನಿಗದಿತ ವೆಬ್ ಪೋರ್ಟಲ್ ಮುಖಾಂತರ ಪ್ರಸ್ತಾವನೆ ಸಲ್ಲಿಸುವಂತೆ ತಿಳಿಸಿದ್ದರು. ಅದರಂತೆ ಪ್ರಸ್ತಾವನೆಯನ್ನು ಸಲ್ಲಿಸಿ ಗುತ್ತಿಗೆ ಅವಧಿ ನವೀಕರಣ ಮಾಡಿಕೊಡುವಂತೆ ಕೋರಲಾಗಿತ್ತು.

ಅರಣ್ಯ ಇಲಾಖೆಗೆ ಎನ್.ಪಿ.ವಿ. ಮತ್ತು ಸಿ.ಎ. ಬಾಬ್ತು ಪಾವತಿಸುವ ಸಲುವಾಗಿ ಕುವೆಂಪು ವಿಶ್ವವಿದ್ಯಾಲಯಕ್ಕೆ ಒಟ್ಟು 14.32 ಕೋಟಿಯಷ್ಟು ಅನುದಾನವನ್ನು ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯು ಬಿಡುಗಡೆ ಮಾಡಿರುತ್ತದೆ. ಆದರೆ, ಸ್ಟೇಜ್-01 ಪ್ರಕ್ರಿಯೆ ಪೂರ್ಣಗೊಳ್ಳದ ಕಾರಣ ಅರಣ್ಯ ಇಲಾಖೆಯವರು ಹಣ ಪಾವತಿಸಲು 'ಡಿಮ್ಯಾಂಡ್ ನೋಟ್' ನೀಡಲು ಸಾಧ್ಯವಾಗುವುದಿಲ್ಲವೆಂದು ತಿಳಿಸಿದ್ದರು. ಅಲ್ಲದೇ, ಸ್ಟೇಜ್-01 ಕ್ಲಿಯರೆನ್ಸ್‌ಗಾಗಿ ಅಗತ್ಯವಿದ್ದ ದಾಖಲಾತಿಗಳನ್ನು ಸಲ್ಲಿಸುವಂತೆ ಅರಣ್ಯ ಇಲಾಖೆಯವರು ವಿವಿಧ ಹಂತಗಳಲ್ಲಿ ವಿಶ್ವವಿದ್ಯಾಲಯಕ್ಕೆ ಕೇಳಿದ್ದು, ಅವುಗಳನ್ನು ಸಂಗ್ರಹಿಸಿ ಮಾಹಿತಿ ಮತ್ತು ದಾಖಲಾತಿಗಳನ್ನು ಆನ್‌ಲೈನ್ ಮತ್ತು ಆಫ್‌ಲೈನ್ ಮೂಲಕ ಅರಣ್ಯ ಇಲಾಖೆಗೆ ಸಲ್ಲಿಸಲಾಗಿದೆ.

ದಿನಾಂಕ:21-03-2026ರ ಅರಣ್ಯ ಇಲಾಖೆಯ ಪತ್ರದಲ್ಲಿ ಕುವೆಂಪು ವಿಶ್ವವಿದ್ಯಾಲಯ ಶೈಕ್ಷಣಿಕ ಚಟುವಟಿಕೆಗಳನ್ನು ನಡೆಸಲು 89.92 ಹೆಕ್ಟರ್ ಅರಣ್ಯ ಭೂಪ್ರದೇಶವನ್ನು ಗುತ್ತಿಗೆ ನವೀಕರಿಸಲು ಕೆಲವು ಷರತ್ತುಗಳೊಂದಿಗೆ ಸ್ಟೇಜ್-01ರ (In-principle) ಅನುಮೋದನೆ ನೀಡಲಾಗಿರುತ್ತದೆ. ಸ್ಟೇಜ್-01ರ ಅನುಮೋದನೆಯಲ್ಲಿ ಉಲ್ಲೇಖಿಸಲಾಗಿರುವ ಷರತ್ತುಗಳನ್ನು ಪೂರೈಸಿ, ಅನುಸರಣಾ ವರದಿಯು ಸ್ವೀಕೃತವಾದ ನಂತರ ಅರಣ್ಯ ಸಂರಕ್ಷಣಾ ಕಾಯ್ದೆ-1980ರ ಪ್ರಕರಣ 2ರ ಅಡಿಯಲ್ಲಿ ಅಂತಿಮ ಸ್ಟೇಜ್-02ರ ಅನುಮೋದನೆಗೆ ಪ್ರಸ್ತಾವನೆಯನ್ನು ಪರಿಗಣಿಸಲಾಗುವುದು ಎಂದು ತಿಳಿಸಿರುತ್ತಾರೆ.

ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಕ್ಷೇತ್ರ ನಿರ್ದೇಶಕರು, ಭದ್ರಾ ಹುಲಿ ಸಂರಕ್ಷಿತ ಪ್ರದೇಶ, ಚಿಕ್ಕಮಗಳೂರು – ಇವರು ದಿನಾಂಕ:25-05-2026 ರ ಪತ್ರದಲ್ಲಿ ರೂ.37,14,95,000/-ಗಳ ಅರಣೀಕರಣ ವೆಚ್ಚ, ರೂ.14,34,93,437/-ಗಳ ಎನ್.ಪಿ.ವಿ ವೆಚ್ಚ ಮತ್ತು ರೂ.48,86,63,931/-ಗಳು ದಂಡವನ್ನು ಸೇರಿ ಒಟ್ಟು ಒಟ್ಟು ರೂ. **ರೂ.1,00,36,52,388.00** ಗಳನ್ನು ಪಾವತಿಸಲು ಸೂಚಿಸಿರುತ್ತಾರೆ. ಈ ದಂಡದ ಮೊತ್ತವು ಚಾಲನೆಯಲ್ಲಿರುವ ಮೊತ್ತವಾಗಿರುತ್ತದೆ. ಈ ದಂಡದ ಮೊತ್ತದ ಪಾವತಿಯ ನಂತರವೇ ಹಂತ-2ರ ಅನುಮೋದನೆಯ ಪ್ರಸ್ತಾವನೆಯನ್ನು ಪರಿಗಣಿಸಲಾಗುವುದು ಎಂದು ತಿಳಿಸಿರುತ್ತಾರೆ.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ

ಈ ಕುರಿತು ಸರ್ಕಾರಕ್ಕೆ ವರದಿ ಮತ್ತು ಈ ಹಿಂದೆ ಬಿಡುಗಡೆ ಮಾಡಿರುವ ಮೊತ್ತಕ್ಕೆ ಉಳಿದ ಹಣವನ್ನು ಪಾವತಿಸಲು ಬಿಡುಗಡೆಮಾಡುವಂತೆ ಪತ್ರವನ್ನು ಬರೆಯಲಾಗಿದೆ ಎಂದು ಸಭೆಗೆ ವಿವರಿಸಿದರು.

ಕುಲಸಚಿವರು ವಿಶ್ವವಿದ್ಯಾಲಯದ ಅರಣ್ಯ ಭೂಮಿ ಗುತ್ತಿಗೆ ಅವಧಿ ನವೀಕರಣ ಸಂಬಂಧ ಇದುವರೆಗೂ ನಡೆದ ಪೂರ್ಣ ಬೆಳವಣಿಗೆಗಳನ್ನು ಸವಿಸ್ತಾರವಾಗಿ ವಿವರಿಸಿರುವುದನ್ನು ಸಭೆಯು ಗಮನಿಸಿ ವಿಶ್ವವಿದ್ಯಾಲಯದ ಹಿತದೃಷ್ಟಿಯಿಂದ ಅಗತ್ಯ ಕ್ರಮಕ್ಕೈಗೊಳ್ಳುವಂತೆ ಕೋರಿದರು.

ಅಂತಿಮವಾಗಿ ಸಭೆಗೆ ಆಗಮಿಸಿ ಸೂಕ್ತ ಸಲಹೆ, ಸಹಕಾರ ನೀಡಿದ ಎಲ್ಲಾ ಸದಸ್ಯರುಗಳಿಗೆ ಕುಲಸಚಿವರು ಹೃತ್ಪೂರ್ವಕವಾಗಿ ವಂದಿಸಿದ ನಂತರ ಸಭೆಯ ಕಲಾಪಗಳು ಮುಕ್ತಾಯವಾದವು.

ಕುಲಪತಿಗಳು
ಕುವೆಂಪು ವಿಶ್ವವಿದ್ಯಾನಿಲಯ
ಶಂಕರಘಟ್ಟ - 577 451,
ಶಿವಮೊಗ್ಗ ಜಿಲ್ಲೆ.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.